4

# ಅನುಬಂಧ-1

**(ಸರ್ಕಾರಿ ಆದೇಶ ಸಂ:ಮಮಇ 215 ಮಭಾಬ 2008 ದಿನಾಂಕ:30.10.2008)**

## ಬಾಲವಿಕಾಸ ಅಕಾಡೆಮಿಯ ರೂಪುರೇಷೆಗಳು

ಬಾಲವಿಕಾಸ ಅಕಾಡೆಮಿ, ಇನ್ನು ಮುಂದೆ "ಅಕಾಡೆಮಿ" ಎಂದು ಉಲ್ಲೇಖಿಸಲಾಗಿದ್ದು, ಅದರ ರಚನೆ, ಸದಸ್ಯರ ಕಾಲಾವಧಿ, ಸಿಬ್ಬಂದಿ, ಅಕಾಡೆಮಿಯ ಸಭೆ ಮತ್ತು ಕಾರ್ಯವ್ಯಾಪ್ತಿ, ಲೆಕ್ಕಪತ್ರ ಮತ್ತು ಪರಿಶೋಧನೆ, ವಾರ್ಷಿಕ ವರದಿ ಇತ್ಯಾದಿಯು ಈ ಕೆಳಗೆ ಸೂಚಿಸಿದಂತಿರುತ್ತದೆ:-

**I. ಅಕಾಡೆಮಿಯ ರಚನೆ:-**

ಅಕಾಡೆಮಿಯು ಈ ಕೆಳಗೆ ಸೂಚಿಸಿದ ಸದಸ್ಯರನ್ನು ಒಳಗೊಂಡಿರತಕ್ಕದ್ದು:-

**1. ಅಧ್ಯಕ್ಷರು:**

ರಾಜ್ಯ ಸರ್ಕಾರವು ಮಕ್ಕಳ ಕ್ಷೇತ್ರದಲ್ಲಿ ಅನುಭವವುಳ್ಳವರು ಹಾಗೂ ಮಕ್ಕಳ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವಂತಹ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಅವರ ಅಧಿಕಾರಾವಧಿಯು ಸರ್ಕಾರದ ಇಚ್ಛೆಗೊಳಪಟ್ಟು 3 ವರ್ಷಗಳಿಗೆ ಮೀರದಂತೆ ಸರ್ಕಾರವು ನಿರ್ದಿಷ್ಟ ಪಡಬಹುದಾದಂತಹ ಅವಧಿಯವರೆಗೆ ಇರತಕ್ಕದ್ದು.

**2. ಸದಸ್ಯರು:**

ಅ) ಶೈಕ್ಷಣಿಕ/ಆಹಾರ/ಮನ:ಶಾಸ್ತ್ರ/ಸಾಹಿತ್ಯ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾಗಿರತಕ್ಕ ನಾಲ್ಕು ಸದಸ್ಯರನ್ನು ಒಳಗೊಂಡಿರತಕ್ಕದ್ದು.

ಆ) ಮೇಲೆ ಸೂಚಿಸಿದ ನಾಲ್ಕು ಸದಸ್ಯರಲ್ಲದೆ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾಗಿರತಕ್ಕ ನಾಲ್ಕು ಅಧಿಕಾರೇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

ಇ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ, ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಈ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಪದನಿಮಿತ್ತ ಸದಸ್ಯರಾಗಿರುತ್ತಾರೆ.

3. ಅಧಿಕಾರೇತರ ಸದಸ್ಯರ ಕಾಲಾವಧಿಯು ಸರ್ಕಾರದ ಇಚ್ಛೆಗೊಳಪಟ್ಟು 3 ವರ್ಷಗಳಿಗೆ ಮೀರದಂತೆ ಸರ್ಕಾರವು ನಿರ್ದಿಷ್ಟ ಪಡಬಹುದಾದಂತಹ ಅವಧಿಯವರೆಗೆ

**3. ಸಂಚಾಲಕರು:-** ಯೋಜನಾಧಿಕಾರಿಯು ಅಕಾಡೆಮಿ ಸಭೆಗಳ ಸಂಚಾಲಕರಾಗಿ ಸಹ ಕಾರ್ಯನಿರ್ವಹಿಸತಕ್ಕದ್ದು.

4. ಸರ್ಕಾರದಿಂದ ನಾಮನಿರ್ದೇಶನ ಮಾಡಿದ ಅಧ್ಯಕ್ಷರು ಅಥವಾ ಸದಸ್ಯರ ರಾಜೀನಾಮೆಯಿಂದಾಗಿ, ನಿಧನದಿಂದಾಗಿ ಅಥವಾ ಇತರೆ ಯಾವುದೇ ಕಾನೂನು ಅಡಚಣೆಯಿಂದಾಗಿ ತೆರವಾದರೆ ಆ ಸ್ಥಾನಕ್ಕೆ ರಾಜ್ಯ ಸರ್ಕಾರವು ಇತರ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡತಕ್ಕದ್ದು:-

ಪರಂತು, ಅಧ್ಯಕ್ಷರ ಸ್ಥಾನದ ತೆರವಿನಿಂದಾಗಿ, ಉಂಟಾಗುವ ಖಾಲಿ ಸ್ಥಾನಕ್ಕೆ ತಾತ್ಕಾಲಿಕವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಇವರನ್ನು ನೇಮಿಸಲು ಸರ್ಕಾರವು ಅಧಿಕಾರ ಹೊಂದಿರುತ್ತದೆ.

## II ಅಕಾಡೆಮಿಯ ಸಭೆ ನೋಟೀಸ್ ಮತ್ತು ಕಾರ್ಯಸೂಚಿ:-

(1) ಅಕಾಡೆಮಿ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಭಾಗವು ಸಭೆಯ ಕೋರಂ ಆಗಿರತಕ್ಕದ್ದು. ಸಭೆಗೆ ಗೊತ್ತುಪಡಿಸಿದ ಸಮಯದಲ್ಲಿ ಕೋರಂ ಇಲ್ಲದಿದ್ದರೆ ಅಧ್ಯಕ್ಷರು ಮೂವತ್ತು ನಿಮಿಷ ಸಭೆಯನ್ನು ಮುಂದೂಡ ತಕ್ಕದ್ದು ಮತ್ತು ಅಂಥ ಅವಧಿಯೊಳಗೂ ಕೋರಂ ಇಲ್ಲದಿದ್ದ ಸಂದರ್ಭದಲ್ಲಿ, ಅಧ್ಯಕ್ಷರು ನಿರ್ಧರಿಸಬಹುದಾದಂಥ ತರುವಾಯದ ದಿನಾಂಕಕ್ಕೆ ಸಭೆಯನ್ನು ಮುಂದೂಡತಕ್ಕದ್ದು. ಮುಂದೂಡಲಾದ ಸಭೆಯಲ್ಲೂ ಕೋರಂ ಇಲ್ಲದಿದ್ದರೆ, ಹಾಗೆ ಮುಂದೂಡಲಾದ ಸಭೆಗೆ ಕೋರಂನ ಅವಶ್ಯಕತೆಯಿರತಕ್ಕದ್ದಲ್ಲ.

(2) ಸಭೆಯ ನೋಟೀಸನ್ನು, ಸಭೆಯ ದಿನಾಂಕಕ್ಕೆ ಕಡೇ ಪಕ್ಷ ಹತ್ತು ದಿನಗಳಿಗಿಂತ ಮುಂಚೆ ಸದಸ್ಯರಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಕಳುಹಿಸತಕ್ಕದ್ದು.

(3) ಒಂದು ನಿರ್ದಿಷ್ಟ ವಿಷಯವನ್ನು ಸಭೆಗಳಲ್ಲಿ ಪರಿಣಾಮಕಾರಿಯಾಗಿ ಮತ್ತು ಸಾಕಷ್ಟು ಪರಿಗಣಿಸುವುದು ಸಾಧ್ಯವಾಗುವುದಿಲ್ಲವೆಂದು ಅಥವಾ ಅದು ತುರ್ತು ಸ್ವರೂಪದ್ದೆಂದು ಅಧ್ಯಕ್ಷರು ಪರಿಗಣಿಸಿದರೆ, ಅಧ್ಯಕ್ಷರು ಯಾರೇ ಸದಸ್ಯ/ಸದಸ್ಯರುಗಳ ಲಿಖಿತ ಮನವಿಯ ಮೇರೆಗೆ ಆ ವಿಷಯವನ್ನು ಪರಿಶೀಲಿಸಲು ಅಕಾಡೆಮಿ ವಿಶೇಷ ಸಭೆಯನ್ನು ಕರೆಯಬಹುದು. ಆದಾಗ್ಯೂ, ಅಂತಹ ಸಭೆಯ ನೋಟೀಸನ್ನು ಸದಸ್ಯರಿಗೆ ಕಡೇ ಪಕ್ಷ ಮೂರು ದಿನಗಳಿಗಿಂತ ಮುಂಚಿತವಾಗಿ ಕಳುಹಿಸತಕ್ಕದ್ದು.

(4) ಸಂಚಾಲಕರು ಆಯೋಗದ ಸಭೆಗಳಿಗೆ ಕಾರ್ಯಸೂಚಿಯನ್ನು ಸಿದ್ಧಪಡಿಸತಕ್ಕದ್ದು. ಸದಸ್ಯರು ತರುವಾಯದ ಸಭೆಯ ಕಾರ್ಯಸೂಚಿಯಲ್ಲಿ ಯಾವುದೇ ನಿರ್ದಿಷ್ಟ ವಿಷಯವನ್ನು ಸೇರಿಸುವಂತೆ ಸಲಹೆ ನೀಡಬಹುದು.

ಕಾರ್ಯಸೂಚಿಗೆ ಸಂಬಂಧಪಟ್ಟ ಟಿಪ್ಪಣಿಗಳನ್ನು ಅಕಾಡೆಮಿಯ ಕಛೇರಿಯು ಸಿದ್ಧಪಡಿಸುವುದು.

(5) ಸಾಮಾನ್ಯವಾಗಿ, ಕಾರ್ಯಸೂಚಿಯ ಮೇಲಿನ ಟಿಪ್ಪಣಿಗಳೊಂದಿಗೆ ಸಭೆಯ ನೋಟೀಸನ್ನು ಮತ್ತು ಈ ಹಿಂದಿನ ಸಭೆಯ ನಡವಳಿಗಳ ಪ್ರತಿಗಳನ್ನು ಏಳು ದಿನಗಳಿಗಿಂತ ಮುಂಚಿತವಾಗಿ ಸದಸ್ಯರಿಗೆ ಕಳುಹಿಸಿಕೊಡತಕ್ಕದ್ದು.

III. ಯೋಜನಾಧಿಕಾರಿ:

(1) ಸರ್ಕಾರದಿಂದ ನೇಮಕ ಮಾಡಲಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರ ಶ್ರೇಣಿಯ ಅಧಿಕಾರಿ ಅಥವಾ ತತ್ಸಮಾನ ವೇತನ ಶ್ರೇಣಿಯ ಇತರೆ ಸೇವೆಗಳ ಅಧಿಕಾರಿಯು ಅಕಾಡೆಮಿಯ ಯೋಜನಾಧಿಕಾರಿಯಾಗಿರುತ್ತಾರೆ. ಯೋಜನಾಧಿಕಾರಿಯು ಅಕಾಡೆಮಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಹಾಗೂ ಅಕಾಡೆಮಿಯ ಅನುದಾನವನ್ನು ನಿರ್ವಹಿಸತಕ್ಕದ್ದು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸುವಂತೆ ಮಾಡತಕ್ಕದ್ದು.

(2) ಯೋಜನಾಧಿಕಾರಿಯು ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂತ ವೇತನ ಮತ್ತು ಇತರ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು.

(3) ಯೋಜನಾಧಿಕಾರಿಯವರ ಕರ್ತವ್ಯಗಳು ಅಕಾಡೆಮಿಯ ನಿಯಂತ್ರಣಕ್ಕೊಳಪಟ್ಟು ಈ ಮುಂದಿನಂತಿರತಕ್ಕದ್ದು:-

ಅ) ಅಕಾಡೆಮಿಯ ಪರವಾಗಿ ಅಧಿಕೃತ ವ್ಯವಹಾರ ನಡೆಸುವುದು.

ಆ) ಅಕಾಡೆಮಿಯ ಮತ್ತು ಅಕ್ಯಾಡೆಮಿಯು ನೇಮಿಸಿದ ಎಲ್ಲಾ ಸಮಿತಿ ಸಭೆಯನ್ನು ಕರೆಯುವ ನೋಟೀಸನ್ನು ಹೊರಡಿಸುವುದು.

ಇ) ಅಕಾಡೆಮಿಯು ಅನುಮೋದಿಸಿದ ಕಾರ್ಯಕ್ರಮಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸುವುದು.

ಈ) ಅಕಾಡೆಮಿ ಪರವಾಗಿ ಒಪ್ಪಂದಗಳಿಗೆ ಸಹಿ ಹಾಕುವುದು.

ಉ) ನಿಯಮಗಳಿಗನುಸಾರವಾಗಿ ವೆಚ್ಚವನ್ನು ಮಾಡುವುದು.

IV. ಅಕಾಡೆಮಿಯ ಸಿಬ್ಬಂದಿ:

1) ಅಕಾಡೆಮಿಯ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಲು ಈ ಆದೇಶದಲ್ಲಿ ಸೃಜಿಸಲಾಗಿರುವ ಹುದ್ದೆಗಳನ್ನು ಹೊಂದಿರತಕ್ಕದ್ದು.

2) ಯೋಜನಾಧಿಕಾರಿ ಹಾಗೂ ಸಿಬ್ಬಂದಿಯ ವೇತನ, ಭತ್ಯೆ ಮತ್ತು ಅಕಾಡೆಮಿಯ ಆಡಳಿತಾತ್ಮಕ ವೆಚ್ಚವನ್ನು ಸರ್ಕಾರವು ಮಂಜೂರು ಮಾಡುವ ಅನುದಾನದಲ್ಲಿ ಭರಿಸತಕ್ಕದ್ದು.

## V. ಅಕಾಡೆಮಿಯ ಪ್ರಕಾರ್ಯಗಳು:-

ಅಕಾಡೆಮಿಯು ಈ ಕೆಳಗಿನ ಎಲ್ಲಾ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು:-

- ಅಕಾಡೆಮಿಯ ಮೂಲ ಉದ್ದೇಶ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸುವುದು ಮುಖ್ಯವಾಗಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯಕ್ರಮಗಳನ್ನು ರೂಪಿಸುವುದು.
- ಗ್ರಾಮೀಣ ಮಕ್ಕಳ ಮನೋವಿಕಾಸಗೊಳಿಸುವ ಮತ್ತು ಆತ್ಮಸ್ಥೈರ್ಯ ತುಂಬುವ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸುವುದು.
- ಡಾ: ಶಿವರಾಮಕಾರಂತರ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸಿದ ಪ್ರಯೋಗಗಳನ್ನು ಅನುಷ್ಠಾನಗೊಳಿಸುವುದು.
- ಪ್ರತಿ ಹಳ್ಳಿಯಲ್ಲಿ ಮಕ್ಕಳಿಗಾಗಿ ವಿಜ್ಞಾನ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಚಟುವಟಿಕೆಗಳ ಕೇಂದ್ರವಾಗಿ ಜೊಂದಿರುವ ``ಬಾಲಜ್ಞಾನ ವಿಕಾಸ ಕೇಂದ್ರ'' ನಿರ್ಮಿಸಿ ಮಕ್ಕಳ ಪ್ರತಿಭೆ ಅರಳಿಸುವ ನಿರಂತರ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
- ಮಕ್ಕಳ ಮನಸ್ಸು ಅರಳಿಸುವ ಮೌಲ್ಯಯುಕ್ತ ಮಕ್ಕಳ ಸಾಹಿತ್ಯ ರಚನೆಯಾಗುವಂತೆ ಮತ್ತು ಅದು ಮಕ್ಕಳ ಕೈಗೆ ತಲುಪುವಂತೆ ಮಾಡುವುದು.
- ಮಗುವು ಹುಟ್ಟಿದಾಗಿನಿಂದ ಹರೆಯದವರೆಗೆ ಮಗುವಿನ ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ವ್ಯಕ್ತಿತ್ವ ಬೆಳವಣಿಗೆಗಾಗಿ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಮನೋವಿಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೆಚ್ಚಿನ ಅಭಿವೃದ್ಧಿಗೊಳಿಸಿ ರಾಜ್ಯದಲ್ಲಿರುವ ಮಕ್ಕಳ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು.
- ಮಕ್ಕಳ ಮೇಲಾಗುತ್ತಿರುವ ಎಲ್ಲಾ ರೀತಿಯ ಶೋಷಣೆಗಳನ್ನು ತಡೆಗಟ್ಟಲು ಅಂತರ ಜಿಲ್ಲಾ ಮತ್ತು ಅಂತರ ರಾಜ್ಯ ಅಂತರ್ ಜಾಲಗಳ ಸಂಪೂರ್ಣ ಬಳಕೆ ಮಾಡುವ ಮೂಲಕ ಮಕ್ಕಳಿಗೆ ಎಲ್ಲಾ ವಿಧದ ಶೋಷಣೆಯ ವಿರುದ್ಧ ರಕ್ಷಣೆ ನೀಡುವ ಕಾರ್ಯಕ್ರಮಗಳನ್ನು ರೂಪಿಸುವುದು.
- ಮಕ್ಕಳ ಕ್ಷೇತ್ರದಲ್ಲಿ ನೂತನ ಅವಿಷ್ಕಾರಗಳು, ಸಂಶೋಧನೆಗಳು ಹಾಗೂ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು.
- ಪರಿಣಾಮಕಾರಿಯಾದ ಶಿಕ್ಷಣ ಕಾರ್ಯಕ್ರಮದ ಮೂಲಕ ದುಡಿಯುವ ಮಕ್ಕಳ ಪುನರ್ವಸತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.

## VI. ಅಕಾಡೆಮಿಯ ಸಮಿತಿಗಳು:

1) ಅಕಾಡೆಮಿಯು ಕಾಲಕಾಲಕ್ಕೆ ಕೈಗೊಳ್ಳಬಹುದಾದಂತಹ ವಿಶೇಷ ವಿಷಯಗಳ ಬಗ್ಗೆ [illegible]ಪರಿಸುವುದಕ್ಕೆ ಅಗತ್ಯವಾಗಬಹುದಾದಂತಹ ಉಪಸಮಿತಿಗಳನ್ನು ನೇಮಕ ಮಾಡಬಹುದು.

2) ಮೇಲೆ ಸೂಚಿಸಿದಂತೆ ಉಪಸಮಿತಿಗೆ ನೇಮಿಸಲಾದ ಯಾವುದೇ ಸರ್ಕಾರೇತರ ಸದಸ್ಯರು ಅಥವಾ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಸಹಸದಸ್ಯರಾಗಿ ತೆಗೆದುಕೊಳ್ಳಲು ಅಕಾಡೆಮಿಯು ಹಕ್ಕನ್ನು ಹೊಂದಿದ್ದು, ಈ ರೀತಿ ನೇಮಕಾತಿಯಾದ ಸಹಸದಸ್ಯರು ಮತ ಚಲಾವಣೆ ಹಕ್ಕನ್ನು ಹೊರತುಪಡಿಸಿ ಅಕಾಡೆಮಿಯ ಸಭೆಗಳಲ್ಲಿ ಪಾಲ್ಗೊಳ್ಳಲು ಹಕ್ಕನ್ನು ಹೊಂದಿರುತ್ತಾರೆ.

3) ಈ ರೀತಿ ಅಕಾಡೆಮಿಯಿಂದ ನೇಮಕಾತಿಯಾದ ಸಹಸದಸ್ಯರು ನಿಗದಿಪಡಿಸಿದ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

VII. <u>ಅಕಾಡೆಮಿಯ ಕೇಂದ್ರ ಕಛೇರಿ:-</u> ಅಕಾಡೆಮಿಯ ಕೇಂದ್ರ ಕಛೇರಿಯು ಧಾರವಾಡದಲ್ಲಿರುತ್ತದೆ.

VIII. <u>ಹಣಕಾಸು ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ:-</u>

(1) ಅಕಾಡೆಮಿಯು ಮುಂದಿನ ಏಪ್ರಿಲ್ ತಿಂಗಳ ಮೊದಲ ದಿನದಂದು ಪ್ರಾರಂಭವಾ
ಗುವ ಹಣಕಾಸು ವರ್ಷಕ್ಕಾಗಿ ಅದರ ಆದಾಯ ಮತ್ತು ವೆಚ್ಚಗಳ
ಆಯವ್ಯಯ ಅಂದಾಜನ್ನು ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು
ಮತ್ತು ಅಂಥ ನಮೂನೆಯಲ್ಲಿ ಪ್ರತಿ ವರ್ಷ ತಯಾರಿಸತಕ್ಕದ್ದು ಮತ್ತು
ಅದನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಸರ್ಕಾರವು ಈ ಬಗ್ಗೆ ಕಾನೂನಿಗನುಸಾರವಾಗಿ ರಾಜ್ಯ ವಿಧಾನಮಂಡಲವು ಸೂಕ್ತ
ಧನವಿನಿಯೋಗ ಮಾಡಿದ ನಂತರ, ಅಕಾಡೆಮಿಯ ಉದ್ದೇಶಗಳಿಗಾಗಿ ಬಳಸುವುದ
ಕ್ಕಾಗಿ ಸರ್ಕಾರವು ತಾವು ಸೂಕ್ತವೆಂದು ಭಾವಿಸಬಹುದಾದಂಥ ಹಣದ ಮೊತ್ತ
ಗಳನ್ನು ಅನುದಾನಗಳ ರೂಪದಲ್ಲಿ ಅಕಾಡೆಮಿಗೆ ಸಂದಾಯ ಮಾಡತಕ್ಕದ್ದು.

(3) ಅಕಾಡೆಮಿಯ ಕರ್ತವ್ಯಗಳ ನಿರ್ವಹಣೆಗಾಗಿ ಅನುದಾನದಿಂದ ಅದು ಸೂಕ್ತವೆಂದು
ಭಾವಿಸಬಹುದಾದ ಅಂಥ ಮೊತ್ತವನ್ನು ಬಳಸಬಹುದು.

(4) ಪ್ರತಿಯೊಂದು ಹಣಕಾಸು ಬಡ್ಜೆಟ್ ಅನುದಾನಗಳ ಸಂಬಂಧದಲ್ಲಿ ಮಾಡಿದ
ವೆಚ್ಚದ ಲೆಕ್ಕಗಳ ವಿವರ ಪತ್ರವನ್ನು ಮತ್ತು ಅಕಾಡೆಮಿಯ ಎಲ್ಲಾ ಲೆಕ್ಕಪತ್ರ
ಗಳನ್ನು ಕರ್ನಾಟಕ ಆರ್ಥಿಕ ಸಂಹಿತೆಗನುಸಾರವಾಗಿ ಮತ್ತು ಕಾಲಕಾಲಕ್ಕೆ
ಸರ್ಕಾರವು ಹೊರಡಿಸುವ ಸೂಚನೆಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು.

(5) ಅಕಾಡೆಮಿಯ ವಾರ್ಷಿಕ ಹಣಕಾಸು ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ
ವರದಿಗಳನ್ನು ಕರ್ನಾಟಕದ ಮಹಾಲೇಖಪಾಲರಿಗೆ ಸಲ್ಲಿಸತಕ್ಕದ್ದು.

(6) ಅಕಾಡೆಮಿಯು ಸರ್ಕಾರದ ಪೂರ್ವಾನುಮೋದನೆ ಪಡೆದು ಒಬ್ಬ ಚಾರ್ಟರ್ಡ್
ಅಕೌಂಟೆಂಟ್‌ರನ್ನು ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು
ಅಕಾಡೆಮಿಯು ನಿರ್ಧರಿಸಬಹುದಾದಷ್ಟು ಲೆಕ್ಕಪರಿಶೋಧನಾ ವೆಚ್ಚಗಳನ್ನು
ಸಂದಾಯ ಮಾಡತಕ್ಕದ್ದು.

(7) ಅಕಾಡೆಮಿಯು ಹಿಂದಿನ ವರ್ಷದ ಅವಧಿಯಲ್ಲಿ ಕೈಗೊಂಡ ತನ್ನ ಕಾರ್ಯಚಟುವಟಿಕೆಗಳು ಮತ್ತು ಕಾರ್ಯಪ್ರಗತಿಯ ಲೆಕ್ಕಪತ್ರಗಳ ಪೂರ್ಣ ವಿವರಗಳನ್ನು ನೀಡಿ ಆ ಹಣಕಾಸು ವರ್ಷವು ಮುಕ್ತಾಯವಾದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಪ್ರಪತ್ರದಲ್ಲಿ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು , ಮತ್ತು ಅದನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**ಪ್ರಪತ್ರ**

**ವಾರ್ಷಿಕ ವರದಿ**

**ಕರ್ನಾಟಕ ಬಾಲವಿಕಾಸ ಅಕಾಡೆಮಿ**

1. ಅಧ್ಯಕ್ಷರು ಮತ್ತು ಸದಸ್ಯರ ವಿವರಗಳು.
2. ಅಕಾಡೆಮಿಯ ಪ್ರಕಾರ್ಯಗಳು
3. ಅಕಾಡೆಮಿಯ ಅಧಿಕಾರಗಳು
4. ಹಿಂದಿನ ವರ್ಷದ ಅವಧಿಯಲ್ಲಿ ಕೈಗೊಂಡ ಕಾರ್ಯಚಟುವಟಿಕೆಗಳು/ಕಾರ್ಯಕ್ರಮಗಳು
5. ಪರಿಶೋಧಿತ ಲೆಕ್ಕಪತ್ರಗಳು.

ಅಕಾಡೆಮಿಯಿಂದ ಹೊರಹೊಮ್ಮುವ ಮಾರ್ಗಸೂಚಿ/ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಜಿಲ್ಲಾಮಟ್ಟದಲ್ಲಿ ಸಂಬಂಧಪಟ್ಟ ಇಲಾಖೆಗಳನ್ನು ಸದಸ್ಯರನ್ನಾಗಿ ಮಾಡಿ CEO ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಸಮಿತಿಯ ಮೂಲಕ ಕಾರ್ಯರೂಪಕ್ಕೆ ತರಬಹುದಾಗಿರುತ್ತದೆ. ಸದರಿ ಸಮಿತಿಯನ್ನು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಣಾಧಿಕಾರಿ (Executive Officer) ಗಳ ಅಧ್ಯಕ್ಷತೆಯಲ್ಲಿ ರಚಿಸಬೇಕಾಗಿರುತ್ತದೆ.

ಜಿಲ್ಲಾಮಟ್ಟದಲ್ಲಿ ಸಮಿತಿಯನ್ನು ರಚಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರನ್ನು ಸಂಯೋಜನಾಧಿಕಾರಿಗಳನ್ನಾಗಿ ತಾಲ್ಲೂಕು ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ತಾಲ್ಲೂಕು ಸಂಚಾಲಕರನ್ನಾಗಿ ನಿಯುಕ್ತಿಗೊಳಿಸಬಹುದಾಗಿರುತ್ತದೆ.

ಪರ್ಯಾಯವಾಗಿ ಅಕಾಡೆಮಿಯ ಕಾರ್ಯಚಟುವಟಿಕೆಗಳನ್ನು ಸ್ವಯಂಕೃತವಾಗಿ ಅನುಷ್ಠಾನಗೊಳಿಸುವ ಬದಲು ಅಕಾಡೆಮಿಯು ಕಾಲಕಾಲಕ್ಕೆ ಯೋಜಿಸುವಂತಹ ಕಾರ್ಯಚಟುವಟಿಕೆಗಳ ಮತ್ತು ಯೋಜನೆಗಳ ಬಗ್ಗೆ ಬಾಹ್ಯಮೂಲಗಳ ಪರಿಣಿತಿ ಹೊಂದಿರುವ ಸಂಸ್ಥೆಗಳಿಂದ ಸೇವೆಗಳನ್ನು ನಿಗದಿತ ಸೇವಾ ಶುಲ್ಕಗಳೊಡನೆ ನಿಯಮಾನುಸಾರ ಪಡೆದುಕೊಂಡು ಅನುಷ್ಠಾನಗೊಳಿಸಬಹುದಾಗಿರುತ್ತದೆ.

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ಅನುಬಂಧ-II

ಸರ್ಕಾರಿ ಆದೇಶ ಸಂಖ್ಯೆ: ಮಮಇ 215 ಮಭಾಬ 2008, ಬೆಂಗಳೂರು ದಿನಾಂಕ:30.10.2008

**ಬಾಲವಿಕಾಸ ಅಕಾಡೆಮಿ ಸ್ಥಾಪಿಸಲು ಮಂಜೂರಾಗಿರುವ ಹುದ್ದೆಗಳ ವಿವರ**

| ಕ್ರಮ ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1 | ಯೋಜನಾಧಿಕಾರಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರು ಅಥವಾ ತತ್ಸಮಾನ ಇತರ ಸೇವೆಗಳ ಅಧಿಕಾರಿಗಳ ನಿಯೋಜನೆ ಮೇರೆಗೆ) | 01 | 20025-28275 |
| 2 | ಯೋಜನಾಧಿಕಾರಿಯವರ ಆಪ್ತ ಸಹಾಯಕರು | 01 | 7275-13350 |
| 3 | ಅಧ್ಯಕ್ಷರ ಆಪ್ತ ಸಹಾಯಕರು | 01 | 7275-13350 |
| 4 | ಆರ್ಥಿಕ ಸಲಹೆಗಾರರು (ರಾಜ್ಯಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ) | 01 | 14050-25050 |
| 5 | ಅಧೀಕ್ಷಕರು (ಆಡಳಿತ) | 01 | 11400-21600 |
| 6 | ಲೆಕ್ಕಾಧೀಕ್ಷಕರು | 01 | 10000-18150 |
| 7 | ದ್ವಿತೀಯ ದರ್ಜೆ ಸಹಾಯಕರು | 01 | 5800-10500 |
| 8 | ಶೀಘ್ರಲಿಪಿಗಾರರು | 01 | 7275-13350 |
| 9 | ಪ್ರಥಮ ದರ್ಜೆ ಸಹಾಯಕರು (ಗಣಕಯಂತ್ರದ ಪರಿಣಿತಿ ಹೊಂದಿರುವವರು) | 01 | 7275-13350 |
| 10 | ವಾಹನ ಚಾಲಕರು | 01 | 5800-10500 |
| 11 | ಗ್ರೂಪ್ "ಡಿ" ನೌಕರರು | 01 | 4800-7275 |

(ವಿ.ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

FROM :SECY.TO GOVT.WCD FAX NO. :22353991 Dec. 18 2009 04:45PM P1

**ಕರ್ನಾಟಕ ಸರ್ಕಾರ**

ಸಂ:ಮಮಇ 176 ಮಭಾಬ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:18.12.2009

ಇಂದ:
ಸರ್ಕಾರದ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು

ಇವರಿಗೆ:
ಯೋಜನಾಧಿಕಾರಿ
ಬಾಲವಿಕಾಸ ಅಕಾಡೆಮಿ
ಧಾರವಾಡ.

ಮಾನ್ಯರೆ,

**ವಿಷಯ:** ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಬೈಲಾಗಳಿಗೆ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:** ಪತ್ರ ಸಂ:ಕಬಾವಿಅ/ಅ.ದಾ/ಅ.ಕಾ/ವಹಿ/2009-10 ದಿನಾಂಕ:24.08.2009.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರಡು ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಬೈಲಾಗಳನ್ನು ಪರಿಶೀಲಿಸಲಾಗಿದೆ. ಸದರಿ ಬೈಲಾಗಳಲ್ಲಿ ಕೆಲವು ಉಪಬಂಧಗಳನ್ನು ಕೈಬಿಟ್ಟಿದ್ದು ಹಾಗೂ ಕೆಲವು ಉಪಬಂಧಗಳನ್ನು ಭಾಗಶ: ಮಾರ್ಪಡಿಸಲಾಗಿದೆ. ಈ ಅನುಮೋದನೆಯು ಸರ್ಕಾರಿ ಆದೇಶ ಸಂ:ಮಮಇ 215 ಮಭಾಬ 2008 ದಿನಾಂಕ:30.10.2008ರಲ್ಲಿ ನಿಗದಿಪಡಿಸಿರುವ ಯೋಜನಾ ರೂಪುರೇಷೆಗಳಿಗೆ ಒಳಪಟ್ಟಿರುತ್ತದೆ. ಇದಲ್ಲದೆ, ಸರ್ಕಾರದಲ್ಲಿ ನಿಗದಿಪಡಿಸಿರುವ ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಇತರೆ ಆರ್ಥಿಕ ನಿಯಮಾವಳಿಗಳಿಗೆ ಹಾಗೂ ಚಾಲ್ತಿಯಲ್ಲಿರುವ ಸೂಚನೆ ಮತ್ತು ಆದೇಶಕ್ಕೆ ಒಳಪಟ್ಟಿರುತ್ತದೆ. ಯಾವುದೇ ಖರ್ಚು ವೆಚ್ಚಗಳಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿದಿದ್ದಲ್ಲಿ ಅಂತಹ ಅನುಮೋದನೆಗೆ ಒಳಪಟ್ಟು ಬೈಲಾಗಳಿಗೆ ಅನುಮೋದನೆ ನೀಡಲಾಗಿದ್ದು, ಸರ್ಕಾರದ ಅನುದಾನವನ್ನು ಅಕಾಡೆಮಿಯು ಸ್ವೀಕೃತಿಯಂತೆ ತೆಗೆದುಕೊಳ್ಳಲಾಗಿರುವುದರಿಂದ, ರಾಜ್ಯ ಅಂದಾಜಿನಲ್ಲಿ ಒದಗಿಸಿರುವ ಆಯವ್ಯಯ ಮಿತಿ ಮತ್ತು ಇತರೆ ಷರತ್ತುಗಳಿಗೆ ಹಾಗೂ ಆರ್ಥಿಕ ಮಿತವ್ಯಯಕ್ಕೆ ಒಳಪಟ್ಟಿರುವುದೆಂದು ತಿಳಿಸುತ್ತಾ, ಸದರಿ ಬೈಲಾಗಳಿಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸುತ್ತಾ, ನೊಂದಣಿ ಮಾಡಲು ಅವಶ್ಯ ಕ್ರಮವನ್ನು ಕೈಗೊಳ್ಳುವಂತೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

V. Kuz

(ವಿ.ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಧಾರವಾಡ

151

## ಕರ್ನಾಟಕ ಬಾಲವಿಕಾಸ ಅಕಾಡೆಮಿ ಉಪ ನಿಬಂಧನೆಗಳು (ಬಾಯಲಾಸ್)

**1. ಆಡಳಿತ:**

1.1 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, (ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಪ.ಪಂ.ಸೇರಿ) ಆರೋಗ್ಯ ಇಲಾಖೆ, ಅರಣ್ಯ ಇಲಾಖೆ ಸೇರಿದಂತೆ ಪಂಚಾಯತ್‌ರಾಜ್ ವ್ಯವಸ್ಥೆಯಡಿ ಬರುವ ಎಲ್ಲಾ ಇಲಾಖೆಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಗ್ರಂಥಾಲಯ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕಾರ್ಮಿಕ ಇಲಾಖೆ, ಪೋಲೀಸ್ ಇಲಾಖೆ, ಕಾನೂನು ಪ್ರಾಧಿಕಾರ, ಲೋಕ ಶಿಕ್ಷಣ ಇಲಾಖೆ, ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಮಕ್ಕಳ ಕ್ಷೇಮಾಭಿವೃದ್ಧಿಗೆ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಎಲ್ಲ ಇಲಾಖೆಗಳಲ್ಲಿಯ ಮಕ್ಕಳ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ಪಡೆದು ಪರಿಶೀಲಿಸುವುದು.

1.2 ಬಾಲವಿಕಾಸ ಅಕಾಡೆಮಿ ಕಾರ್ಯ ಚಟುವಟಿಕೆಗಳಿಗೆ ಜಿಲ್ಲಾ ಮತ್ತು ತಾಲ್ಲೂಕು ಸ್ಥಳಗಳಲ್ಲಿರುವ ಬಾಲಭವನಗಳನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದು ಅನುಷ್ಠಾನ ಕೇಂದ್ರಗಳನ್ನಾಗಿಸುವುದು.

1.3 ಬಾಲವಿಕಾಸ ಅಕಾಡೆಮಿ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಬಾಲವಿಕಾಸ ಅಕಾಡೆಮಿ ಅನುಷ್ಠಾನ ಸಮಿತಿಗಳನ್ನು ರಚಿಸುವುದು.

1.4 ಜಿಲ್ಲಾಮಟ್ಟದ ಸಮಿತಿಯಲ್ಲಿ ಜಿಲ್ಲಾ ಪಂಚಾಯತದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಕಾರ್ಯದರ್ಶಿಗಳಾಗಿರುವುದು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ಜಿಲ್ಲಾ ಮಕ್ಕಳ ಕಲ್ಯಾಣ ಕೇಂದ್ರದ ಅಧ್ಯಕ್ಷರು ಹಾಗೂ ಅಕಾಡೆಮಿ ಅಧ್ಯಕ್ಷರು ಆಯ್ಕೆ ಮಾಡಿದ ಆಯಾ ಜಿಲ್ಲೆಯ ಮಕ್ಕಳ ಸಾಹಿತ್ಯ ಹಾಗೂ ಸಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಇಬ್ಬರು ವ್ಯಕ್ತಿಗಳು ಮತ್ತು ಕಾರ್ಯಕ್ರಮ ಅನುಷ್ಠಾನಕ್ಕೆ ಗುರುತಿಸಿದ ಕಾರ್ಯಕ್ರಮ ಸಂಯೋಜಕರು ಸದಸ್ಯರಾಗಿರುವುದು, ಸಮಿತಿಯಲ್ಲಿ ಒಟ್ಟು 7 ಜನ ಸದಸ್ಯರಿರುವುದು.

1.5 ತಾಲ್ಲೂಕು ಮಟ್ಟದ ಸಮಿತಿಯಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿರುವುದು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ತಾಲ್ಲೂಕು ಅಧಿಕಾರಿಗಳು ಕಾರ್ಯದರ್ಶಿಗಳಾಗಿರುವುದು. ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಅಕಾಡೆಮಿ ಅಧ್ಯಕ್ಷರು ಆಯ್ಕೆ ಮಾಡಿದ ಆಯಾ ತಾಲ್ಲೂಕಿನ ಮಕ್ಕಳ ಸಾಹಿತ್ಯ ಹಾಗೂ ಸಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಇಬ್ಬರು ವ್ಯಕ್ತಿಗಳು

18/12

ಮತ್ತು ಕಾರ್ಯಕ್ರಮ ಅನುಷ್ಠಾನಕ್ಕೆ ಗುರುತಿಸಿದ ಕಾರ್ಯಕ್ರಮ ಸಂಯೋಜಕರು ಸೇರಿದಂತೆ ಒಟ್ಟು ಏಳು ಜನರಿರುವ ಸಮಿತಿ ಕಾರ್ಯನಿರ್ವಹಿಸುವುದು.

1.6 ಪ್ರತಿ ಹಳ್ಳಿಯಲ್ಲಿ ಮಕ್ಕಳ ಮಿತ್ರ ಪಡೆ ಸ್ಥಾಪಿಸುವುದು.

1.7 ಗ್ರಾಮದಲ್ಲಿರುವ ಹೈಸ್ಕೂಲ್/ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಅಧ್ಯಕ್ಷರಾಗಿದ್ದು, ಕ್ರಿಯಾಶೀಲ ಶಿಕ್ಷಕರೊಬ್ಬರು ಸಂಚಾಲಕರಾಗಿರುತ್ತಾರೆ. ಈ ಮಕ್ಕಳ ಮಿತ್ರ ಪಡೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಆರೋಗ್ಯ ಇಲಾಖೆಯ ಆಶಾ, ಯುವಕ ಮಂಡಳ ಪ್ರತಿನಿಧಿ, ಯುವತಿ ಮಂಡಳದ ಪ್ರತಿನಿಧಿ, ಸ್ತ್ರೀಶಕ್ತಿ ಸಂಘದ ಪ್ರತಿನಿಧಿ ಸದಸ್ಯರಾಗಿರುವ ಒಟ್ಟು ಏಳು ಜನರಿರುವ ಮಕ್ಕಳ ಮಿತ್ರ ಪಡೆ ಇರುವುದು.

1.8 ಅಕಾಡೆಮಿಯ ಸಾಮಾನ್ಯ ಸಭೆಯನ್ನು ಮೂರು ತಿಂಗಳಿಗೊಮ್ಮೆ ಕರೆಯುವುದು.

## 2. ಅಕಾಡೆಮಿ ಆಡಳಿತ ವ್ಯಾಪ್ತಿ:

2.1 ಕರ್ನಾಟಕ ರಾಜ್ಯದ ಭೂ ಪ್ರದೇಶದಲ್ಲಿ ಬರುವ ಎಲ್ಲಾ ಪ್ರದೇಶಗಳಲ್ಲಿಯ 0-18 ವಯಸ್ಸಿನ ಮಕ್ಕಳು ಅಕಾಡೆಮಿ ವ್ಯಾಪ್ತಿಗೆ ಒಳಪಡುವರು.

## 3. ಅಕಾಡೆಮಿ ಸದಸ್ಯರ ನೇಮಕ:

2.2 ಬಾಲವಿಕಾಸ ಅಕಾಡೆಮಿಯು ಒಟ್ಟು ಹನ್ನೊಂದು ಜನ ಸದಸ್ಯರ ಸಮಿತಿಯನ್ನು ಹೊಂದಿರುತ್ತದೆ. ರಾಜ್ಯ ಸರ್ಕಾರವು ಅಧ್ಯಕ್ಷರು ಹಾಗೂ ಎಂಟು ಜನ ಸದಸ್ಯರನ್ನು ನೇಮಿಸುವುದು. ಎರಡು ಜನ ಸರ್ಕಾರದ ಇಲಾಖೆಯ ಪ್ರತಿನಿಧಿಗಳಾದ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಇಬ್ಬರು ಪದನಿಮಿತ್ತ ಸದಸ್ಯರಾಗಿರುವರು.

## 4. ಸಂಪನ್ಮೂಲ ಕ್ರೋಢೀಕರಣ:

4.1 ಬಾಲವಿಕಾಸ ಅಕಾಡೆಮಿಯು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಇತರೆ ಸರ್ಕಾರೇತರ ಸಂಸ್ಥೆಗಳಿಂದ, ವ್ಯಕ್ತಿಗಳಿಂದ, ದತ್ತಿ ರೂಪದಲ್ಲಿ ಸಂಪನ್ಮೂಲ ಕ್ರೋಢಿಕರಿಸಿ ಅಕಾಡೆಮಿಯ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಕಾರ್ಯ ಚಟುವಟಿಕೆ ಸರ್ಕಾರದ ಅನುಮೋದನೆಯೊಂದಿಗೆ ರೂಪಿಸುವುದು ಹಾಗೂ ಅನುಷ್ಠಾನಗೊಳಿಸುವುದು.

18/12

## 5. ಅಧ್ಯಕ್ಷರ ಅಧಿಕಾರ:

5.1 ಅಕಾಡೆಮಿಗೆ ನಾಲ್ಕು ಜನ ವಿಶೇಷ ಪರಿಣಿತರನ್ನು ಕೋಆಪ್ಟ್ ಮೂಲಕ ಆಯ್ಕೆ ಮಾಡುವುದು.

5.2 ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ಸೂತ್ರಗಳನ್ನು ರಚಿಸುವುದು ಮತ್ತು ಅನುಮೋದನೆಗೊಂಡ ವಾರ್ಷಿಕ ಕ್ರಿಯಾ ಯೋಜನೆ ಅನುಸಾರವಾಗಿ ಹಣವನ್ನು ಖರ್ಚು ಮಾಡುವಾಗ ಕಡತ ಮಂಡಿಸಿ ಟಿಪ್ಪಣಿ ಮೂಲಕ ಅಧ್ಯಕ್ಷರ ಅನುಮೋದನೆ ಪಡೆದಿರಬೇಕು. ಅಕಾಡೆಮಿಯ ಆಡಳಿತಾತ್ಮಕ ಪ್ರಮುಖ ನಿರ್ಣಯವನ್ನು ಅಧ್ಯಕ್ಷರ ಗಮನಕ್ಕೆ ತಂದ ನಂತರವೇ ಜಾರಿಗೊಳಿಸುವುದು.

5.3 ಅಕಾಡೆಮಿಯು ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಸಂಪೂರ್ಣವಾಗಿ ರಾಜ್ಯದ ಹಾಗೂ ಅಂತರ್ ರಾಜ್ಯದ ಮಕ್ಕಳ ವಿಷಯ ತಜ್ಞರ ಹಾಗೂ ಬುದ್ಧಿಜೀವಿಗಳ ಪಾಲ್ಗೊಳ್ಳುವಿಕೆ ಮೇಲೆ ಕಾರ್ಯಕ್ರಮಗಳು ಇರುವುದು. ಕರ್ನಾಟಕ ರಾಜ್ಯದಾದ್ಯಂತ ವರ್ಷವಿಡಿ ವಿವಿಧ ಸ್ಥಳ ಗಳಲ್ಲಿ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸುವುದು. ಈ ಸಂದರ್ಭದಲ್ಲಿ ಸದಸ್ಯರ ನೇಮಕಾತಿ, ಸಮಿತಿಗಳ ರಚನೆ, ಕಾರ್ಯಕ್ರಮ ಚರ್ಚೆ, ಪ್ರಶಸ್ತಿಗಳು, ಸಾಹಿತ್ಯ ಚಟುವಟಿಕೆ ಗಳು, ಮಕ್ಕಳ ಸಾಹಿತ್ಯ ಸಂಪಾದನೆ, ವಾರ್ತಾ ಪತ್ರದ ಪ್ರಕಟಣೆ, ವಿವಿಧ ಸ್ಥರದ ಮಕ್ಕಳಿಗೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳ, ಬಾಲಜ್ಞಾನ ಸಮುಚ್ಚಯದಲ್ಲಿ ಬರುವ ಕೇಂದ್ರ ಚಟುವಟಿಕೆಗಳ ಅನುಷ್ಠಾನ ಕುರಿತು ಇತ್ಯಾದಿಗಲನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಸಂದರ್ಭಾನುಸಾರವಾಗಿ ಅಧ್ಯಕ್ಷರು ಅವಶ್ಯಕ ಖರ್ಚುಗಳನ್ನು ನಿಯಮಾನುಸಾರ ಭರಿಸುವ ಅಧಿಕಾರವನ್ನು ಅಧ್ಯಕ್ಷರು ಹೊಂದಿರುವುದು.

5.4 ಕಾರ್ಯಕ್ರಮಗಳಿಗೆ ಕಾಯ್ದಿರಿಸಲಾದ ಕ್ರಿಯಾ ಯೋಜನೆ ರಿತ್ಯಾ ನಿರ್ದಿಷ್ಟಪಡಿಸಿದ ಹಣದ ಉಳಿತಾಯ ವೆಚ್ಚ ಮತ್ತು ಕಾಲಮಿತಿ ಪರಿಶೀಲಿಸಿ ಸ್ಥಾಯಿ ಸಮಿತಿ ಅನುಮೋದನೆಯೊಂದಿಗೆ ಬೇರೆ ಬೇರೆ ಚಟುವಟಿಕೆಗಳಿಗೆ ಅಥವಾ ಪೂರಕ ಚಟುವಟಿಕೆಗಳಿಂದ ಸದರಿ ಉಳಿತಾಯದ ಹಣವನ್ನು ಹೊಂದಾಣಿಕೆ ಮಾಡಿ ಕಾರ್ಯಕ್ರಮ ಅನುಷ್ಠಾನಗೊಳಿಸುವ ಅಧಿಕಾರ ಅಧ್ಯಕ್ಷರು ಹೊಂದಿರುವುದು.

## 6. ಯೋಜನಾಧಿಕಾರಿ:

1. ಸರ್ಕಾರದಿಂದ ನೇಮಕ ಮಾಡಲಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರ ಶ್ರೇಣಿಯ ಅಧಿಕಾರಿ ಅಥವಾ ತತ್ಸಮಾನ ವೇತನ ಶ್ರೇಣಿಯ ಇತರೆ ಸೇವೆಗಳ ಅಧಿಕಾರಿಯು ಅಕಾಡೆಮಿಯ ಯೋಜನಾಧಿಕಾರಿಯಾಗಿ ರುತ್ತಾರೆ. ಯೋಜನಾಧಿಕಾರಿಯು ಅಕಾಡೆಮಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಯಾಗಿರತಕ್ಕದ್ದು ಹಾಗೂ ಅಕಾಡೆಮಿಯ ಅನುದಾನವನ್ನು ನಿರ್ವಹಿಸತಕ್ಕದ್ದು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸುವಂತೆ ಮಾಡತಕ್ಕದ್ದು.
2. ಯೋಜನಾಧಿಕಾರಿಯು ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂತ ವೇತನ ಮತ್ತು ಇತರ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು.

3. ಯೋಜನಾಧಿಕಾರಿಯವರ ಕರ್ತವ್ಯಗಳು ಅಕಾಡೆಮಿಯ ನಿಯಂತ್ರಣಕ್ಕೊಳಪಟ್ಟು ಈ ಮುಂದಿನಂತಿರತಕ್ಕದ್ದು:

ಅ) ಅಕಾಡೆಮಿಯ ಪರವಾಗಿ ಅಧಿಕೃತ ವ್ಯವಹಾರ ನಡೆಸುವುದು.

ಆ) ಅಕಾಡೆಮಿಯ ಮತ್ತು ಅಕಾಡೆಮಿಯು ನೇಮಿಸಿದ ಎಲ್ಲಾ ಸಮಿತಿ ಸಭೆಯನ್ನು ಕರೆಯುವ ನೋಟಿಸನ್ನು ಹೊರಡಿಸುವುದು.

ಇ) ಅಕಾಡೆಮಿಯು ಅನುಮೋದಿಸಿದ ಕಾರ್ಯಕ್ರಮಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸುವುದು.

ಈ) ಅಕಾಡೆಮಿ ಪರವಾಗಿ ಒಪ್ಪಂದಗಳಿಗೆ ಸಹಿ ಹಾಕುವುದು.

ಉ) ನಿಯಮಗಳಿಗನುಸಾರವಾಗಿ ವೆಚ್ಚವನ್ನು ಮಾಡುವುದು.

ಊ) ಅಕಾಡೆಮಿಯು ಅನುಮೋದಿಸಿರುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ಸರ್ಕಾರಿ ಆದೇಶ ಸಂ:ಮಮಇ 215 ಮಭಾಬ 2008 ದಿನಾಂಕ:30.10.2008 ರಲ್ಲಿ ನಿಗದಿಪಡಿಸಿರುವ ವ್ಯಾಪ್ತಿ ಮೀರಿದಲ್ಲಿ ಸರ್ಕಾರದ ಅನುಮೋದನೆಯಿಲ್ಲದೆ ಅನುಷ್ಠಾನಗೊಳಿಸತಕ್ಕದ್ದಲ್ಲ.

**6.1 ಕಾರ್ಯಸ್ವರೂಪ:**

6.1 ಅಕಾಡೆಮಿಯ ಕಾರ್ಯಚಟುವಟಿಕೆಯ ವರ್ಷಾರಂಭದಲ್ಲಿ ಆಯ್ದ ಮಕ್ಕಳ ಹಾಗೂ ಮಕ್ಕಳ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಆಯ್ದ ಸಂಸ್ಥೆಗಳ ಸಭೆ ಕರೆದು, ಮಕ್ಕಳ ಹಕ್ಕುಗಳು, ಮಕ್ಕಳ ಸಮಸ್ಯೆ ಕುರಿತು ಚರ್ಚಿಸಿ ಅಭಿಪ್ರಾಯ ಸ್ವೀಕರಿಸಿ ಮಕ್ಕಳ ಕಾರ್ಯಕ್ರಮ ರೂಪಿಸುವಲ್ಲಿ ಪರಿಗಣನೆಗೆ ತೆಗೆದುಕೊಳ್ಳುವುದು.

6.2 ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ರಾಜ್ಯ, ರಾಷ್ಟ್ರ, ಅಂತರ್‌ರಾಷ್ಟ್ರ ಮಟ್ಟದ ವಿಚಾರ ಸಂಕೀರ್ಣ, ಕಮ್ಮಟ, ಸಂವಾದ ಹಾಗೂ ಉನ್ನತ ಮಟ್ಟದ ಸಾಹಿತ್ಯ ಉತ್ಸವಗಳನ್ನು ಸ್ವತಂತ್ರವಾಗಿ ಇಲ್ಲವೆ ಸಂಘ-ಸಂಸ್ಥೆಗಳ ಸಹಕಾರದಿಂದ ಸಂಘಟಿಸುವುದು.

6.3 ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಜನಪದ ಪರಿಷತ್ತು, ರಾಜ್ಯ ಮಕ್ಕಳ ಸಾಹಿತ್ಯ ವೇದಿಕೆ, ಕರ್ನಾಟಕ ವಿಜ್ಞಾನ ಪರಿಷತ್, ಭಾರತ ಜ್ಞಾನ ವಿಜ್ಞಾನ ಸಮಿತಿ, ನಿನಾಸಂ, ಬೆಂಗಳೂರು ಬಾಲಭವನ, ಸೊಸೈಟಿ, ಧಾರವಾಡ ಹಾಗೂ ಮೈಸೂರು ರಂಗಾಯಣ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ, ಚಿಲಿಪಿಲಿ ಸಮೂಹ, ಡೆಪ್ಯೂಟ ಚೆನ್ನಬಸಪ್ಪ ಪ್ರತಿಷ್ಠಾನಗಳಂತೆ ಮಕ್ಕಳ ಸಾಹಿತ್ಯ, ಸಂಸ್ಕೃತಿ ಹಾಗೂ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ತೊಡಗಿಸಿಕೊಂಡಿರುವ ಪ್ರಮುಖ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಇಲ್ಲವೆ ಅಕಾಡೆಮಿಯ ಸಮಿತಿಗಳ ಮೂಲಕ

ಮಕ್ಕಳ ಕಮ್ಮಟ, ಮಕ್ಕಳ ಸಾಹಿತ್ಯ ಹಾಗೂ ಸಾಂಸ್ಕೃತಿ ಸಮ್ಮೇಳನ, ಸೃಜನೋತ್ಸವ, ಬಾಲೋತ್ಸವ ಹೀಗೆ ಮೊದಲಾದ ಕಾರ್ಯಕ್ರಮ ಸಂಘಟಿಸುವುದು. ಈ ಸಂದರ್ಭದಲ್ಲಿ 'ಮಕ್ಕಳ ಪ್ರತಿಭೆ ಗುರುತಿಸಿ ಪ್ರಶಸ್ತಿ ನೀಡಿ ಪುರಸ್ಕರಿಸುವುದು.

6.4 ಅಗತ್ಯ ಸಂದರ್ಭದಲ್ಲಿ ಆಯಾ ಕ್ಷೇತ್ರದ ವಿಷಯ ತಜ್ಞರನ್ನೊಳಗೊಂಡ ಉಪಸಮಿತಿ ರಚಿಸಿಕೊಂಡು ಕಾರ್ಯನಿರ್ವಹಿಸುವುದು. ಈ ಸಮಿತಿ ತಾತ್ಕಾಲಿಕ ಅವಧಿಗೆ ರಚನೆಯಾಗಿದ್ದು, ಅದಕ್ಕೆ ನೀಡಲಾದ ಕಾರ್ಯ ಪೂರ್ಣಗೊಂಡ ಮೇಲೆ ವಿಸರ್ಜನೆಗೊಳ್ಳುವುದು.

## 7. ಅಕಾಡೆಮಿಯ ಸಿಬ್ಬಂದಿ:

1. ಅಕಾಡೆಮಿಯ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಲು ಈ ಆದೇಶದಲ್ಲಿ ಸೃಜಿಸಲಾಗಿರುವ ಹುದ್ದೆಗಳನ್ನು ಹೊಂದಿರತಕ್ಕದ್ದು.
2. ಯೋಜನಾಧಿಕಾರಿ ಹಾಗೂ ಸಿಬ್ಬಂದಿಯ ವೇತನ, ಭತ್ಯೆ ಮತ್ತು ಅಕಾಡೆಮಿಯ ಆಡಳಿತಾತ್ಮಕ ವೆಚ್ಚವನ್ನು ಸರ್ಕಾರವು ಮಂಜೂರು ಮಾಡುವ ಅನುದಾನದಲ್ಲಿ ಭರಿಸತಕ್ಕದ್ದು.

## 7.1 ಪ್ರಶಸ್ತಿಗಳು:

7.1 ಮಕ್ಕಳ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರ ಸೇರಿದಂತೆ ಮಕ್ಕಳ ಮನೋವಿಕಾಸ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಧಕರನ್ನು ಗುರುತಿಸಿ ಪ್ರತಿ ವರ್ಷ ಅಕಾಡೆಮಿ ಗೌರವ ಪ್ರಶಸ್ತಿ ನೀಡುವುದು.

ಅ) ಮಕ್ಕಳ ಸಾಹಿತ್ಯ ಕ್ಷೇತ್ರ
ಆ) ಮಕ್ಕಳ ರಂಗಭೂಮಿ ಕ್ಷೇತ್ರ
ಇ) ಮಕ್ಕಳ ಸಂಗೀತ/ಚಿತ್ರಕಲೆ/ಸಾಂಸ್ಕೃತಿಕ ಕ್ಷೇತ್ರ
ಈ) ಮಕ್ಕಳ ಹಕ್ಕುಗಳ ಸಂರಕ್ಷಣೆ/ಪುನರ್ವಸತಿ ಕ್ಷೇತ್ರ
ಉ) ವಿಕಲಚೇತನ/ಮಾನಸಿಕ/ಬಾಲಕಾರ್ಮಿಕ/ಮುಕ್ತ ಶಿಕ್ಷಣ ಕ್ಷೇತ್ರ

7.2 ಪ್ರಶಸ್ತಿ ಆಯ್ಕೆ ಪ್ರಕ್ರಿಯೆಯು ಸಮಿತಿಯ ನಿರ್ಣಯದಂತೆ ನಡೆಯುವುದು.

7.3 ಆಯ್ಕೆಯಾದ ಮಹನೀಯರಿಗೆ ತಲಾ ರೂ.10,000/-ಗಳ (ಹತ್ತು ಸಾವಿರ) ನಗದು, ಶಾಲು, ನೆನಪಿನ ಕಾಣಿಕೆ, ಹಾರ, ಫಲತಾಂಬೂಲ ಮತ್ತು ಪ್ರಮಾಣ ಪತ್ರದ ಸ್ಮರಣಿಕೆ ನೀಡಿ ಪುರಸ್ಕರಿಸುವುದು. ನಿಗದಿತ ಬಸ್/ರೈಲ್ ಪ್ರಯಾಣ ಭತ್ಯೆ ನೀಡುವುದು.

19/12

7.4 ವಿವಿಧ ಪ್ರಕಾರದ ಮಕ್ಕಳ ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡಲು ದಾನಿಗಳಿಂದ (ಕನಿಷ್ಠ ರೂ.50,000/-) ದತ್ತಿ ಪಡೆದು ಸರ್ಕಾರದ ಅನುಮೋದನೆ

ಪಡೆದು ಶಾಶ್ವತ ನಿಧಿ ಸ್ಥಾಪಿಸುವುದು. ನಿಧಿಯ ಬಡ್ಡಿ ಹಣದಿಂದ ಆಯಾ ವರ್ಷ ಕೃತಿಗಳನ್ನು ಆಯ್ಕೆ ಮಾಡಿ ಬಹುಮಾನ ನೀಡುವುದು.

**8. ಹಣಕಾಸು ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನ:**

1. ಅಕಾಡೆಮಿಯು ಮುಂದಿನ ಏಪ್ರಿಲ್ ತಿಂಗಳ ಮೊದಲ ದಿನದಂದು ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ಅದರ ಆದಾಯ ಮತ್ತು ವೆಚ್ಚಗಳ ಆಯವ್ಯಯ ಅಂದಾಜನ್ನು ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ನಮೂನೆಯಲ್ಲಿ ಪ್ರತಿ ವರ್ಷ ತಯಾರಿಸತಕ್ಕದ್ದು ಮತ್ತು ಅದನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
2. ಸರ್ಕಾರವು ಈ ಬಗ್ಗೆ ಕಾನೂನಿಗನುಸಾರವಾಗಿ ರಾಜ್ಯ ವಿಧಾನಮಂಡಲವು ಸೂಕ್ತ ಧನವಿಯೋಗ ಸರ್ಕಾರವು ಮಾಡಿದ ಅಕಾಡೆಮಿಯ ಉದ್ದೇಶಗಳಿಗಾಗಿ ಬಳಸುವುದಕ್ಕಾಗಿ ಸರ್ಕಾರವು ತಾವು ಸೂಕ್ತವೆಂದು ಭಾವಿಸಬಹುದಾದಂಥ ಹಣದ ಮೊತ್ತಗಳನ್ನು ಅನುದಾನಗಳ ರೂಪದಲ್ಲಿ ಅಕಾಡೆಮಿಗೆ ಸಂದಾಯ ಮಾಡತಕ್ಕದ್ದು.
3. ಅಕಾಡೆಮಿಯ ಕರ್ತವ್ಯಗಳ ನಿರ್ವಹಣೆಗಾಗಿ ಅನುದಾನದಿಂದ ಬಾಲವಿಕಾಸ ಅಕಾಡೆಮಿ ಸ್ಥಾಪಿಸಿ ಉದ್ದೇಶದ ಹಿನ್ನೆಲೆಯಲ್ಲಿ ಸೂಕ್ತವೆಂದು ಭಾವಿಸಬಹುದಾದ ಅಂತ ಮೊತ್ತವನ್ನು ಬಳಸಬಹುದು.
4. ಪ್ರತಿಯೊಂದು ಹಣಕಾಸು ಬಡ್ಜೆಟ್ ಅನುದಾನಗಳ ಸಂಬಂಧದಲ್ಲಿ ಮಾಡಿದ ವೆಚ್ಚದ ಲೆಕ್ಕಗಳ ವಿವರ ಪತ್ರವನ್ನು ಮತ್ತು ಅಕಾಡೆಮಿಯ ಎಲ್ಲಾ ಲೆಕ್ಕಪತ್ರಗಳನ್ನು ಕರ್ನಾಟಕ ಆರ್ಥಿಕ ಸಂಹಿತೆಗನುಸಾರವಾಗಿ ಮತ್ತು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಸೂಚನೆಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು.
5. ಅಕಾಡೆಮಿಯ ವಾರ್ಷಿಕ ಹಣಕಾಸು ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಕರ್ನಾಟಕದ ಮಹಾಲೇಖಪಾಲರಿಗೆ ಸಲ್ಲಿಸತಕ್ಕದ್ದು.
6. ಅಕಾಡೆಮಿಯು ಸರ್ಕಾರದ ಪೂರ್ವಾನುಮೋದನೆ ಪಡೆದು ಒಬ್ಬ ಚಾರ್ಟೆಡ್ ಅಕೌಂಟೆಂಟ್‌ರನ್ನು ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಅಕಾಡೆಮಿಯು ನಿಧರಿಸಬಹುದಾದಷ್ಟು ಲೆಕ್ಕಪರಿಶೋಧನಾ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು.
7. ಅಕಾಡೆಮಿಯು ಹಿಂದಿನ ವರ್ಷದ ಅವಧಿಯಲ್ಲಿ ಕೈಗೊಂಡ ತನ್ನ ಕಾರ್ಯಚಟುವಟಿಕೆಗಳು ಮತ್ತು ಕಾರ್ಯಪ್ರಗತಿಯ ಲೆಕ್ಕಪತ್ರಗಳ ಪೂರ್ಣ ವಿವರಗಳನ್ನು ನೀಡಿ ಆ ಹಣಕಾಸು ವರ್ಷವು ಮುಕ್ತಾಯವಾದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಪತ್ರದಲ್ಲಿ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು.

**8.1 ಸಾಹಿತ್ಯಿಕ ಚಟುವಟಿಕೆಗಳು:**

8.1 ಮಕ್ಕಳ ಸಾಹಿತ್ಯ ಪುಸ್ತಕ ಬಹುಮಾನ ಪ್ರತಿ ವರ್ಷ ಆಯಾ ವರ್ಷದ ಅವಧಿಯಲ್ಲಿ ಪ್ರಕಟಗೊಂಡ ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪರಿಗಣಿಸಿ ಈ ನಿಮಿತ್ತ ರಚಿಸಲಾದ ಆಯ್ಕೆ ಸಮಿತಿಯು ಶಿಫಾರಸ್ಸಿನಂತೆ ಪ್ರತಿ ವಿಭಾಗದಲ್ಲಿ ಒಂದು ಪುಸ್ತಕ ಆಯ್ಕೆ ಮಾಡಿ, ಪುಸ್ತಕ ಬಹುಮಾನ ನೀಡುವುದು. ಪುಸ್ತಕ ಬಹುಮಾನ ಪರಿಗಣನೆಯಲ್ಲಿ ಆಯ್ಕೆ ಪ್ರಕ್ರಿಯೆಯಲ್ಲಿ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯ್ಕೆ ನಡಸುವುದು. ಆಯಾ ವಿಭಾಗದಲ್ಲಿ ಕಥೆ, ಕಾವ್ಯಗಳಲ್ಲಿ ಕನಿಷ್ಠ ಮೂರು ಪುಸ್ತಕಗಳಾದರೂ ಆಯ್ಕೆಗೆ ಇರಬೇಕು. ಉಳಿದ ಪ್ರಕಾರದ ಸಾಹಿತ್ಯ ಪ್ರಕಾರಗಳಲ್ಲಿ ಕನಿಷ್ಠ ಎರಡಾದರೂ ಆಯ್ಕೆಗೆ ಬಂದಿರಬೇಕು.

1. ಮಕ್ಕಳ ಕಥೆ
2. ಮಕ್ಕಳ ಕಾವ್ಯ
3. ಮಕ್ಕಳ ಜನಪದ (ಸೃಜನಾತ್ಮಕ/ಸಂಪಾದಿತ)
4. ಮಕ್ಕಳ ನಾಟಕ
5. ವೈಜ್ಞಾನಿಕ ಕೃತಿ
6. ಮಕ್ಕಳ ಕಾದಂಬರಿ
7. ಅನುವಾದಿತ ಯಾವುದೇ ಪ್ರಕಾರದ ಮಕ್ಕಳ ಸಾಹಿತ್ಯ
8. ಸಂಕೀರ್ಣ (ವಿಮರ್ಶೆ, ಲೇಖನ ಇತ್ಯಾದಿ)

8.2 ಪ್ರತಿ ವರ್ಷ ಒಟ್ಟು ಎಂಟು ಪ್ರಕಾರಗಳಲ್ಲಿ ಪುಸ್ತಕ ಬಹುಮಾನಕ್ಕೆ ಆಯ್ಕೆ ನಡೆಯುವುದು. ಈ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಗಿನ ನಿಯಮಾವಳಿಗಳನ್ನು ಪಾಲಿಸಬೇಕು:

8.2.1 ಪ್ರತಿ ಪ್ರಕಾರದ ಬಹುಮಾನಿತ ಪುಸ್ತಕಕ್ಕೆ ತಲಾ ರೂ.5000/-ಗಳ (ಐದು ಸಾವಿರ) ನಗದು, ಶಾಲು, ನೆನಪಿನ ಕಾಣಿಕೆ, ಹಾರ, ಫಲತಾಂಬೂಲ ಮತ್ತು ಪ್ರಮಾಣ ಪತ್ರದ ಸ್ಮರಣಿಕೆ ಹಾಗೂ ಪ್ರಯಾಣ ಭತ್ಯೆ ನೀಡುವುದು.

18/12

8.2.2 ಪ್ರತಿ ವರ್ಷ ಬಹುಮಾನಕ್ಕಾಗಿ ಪುಸ್ತಕಗಳನ್ನು ಬರಮಾಡಿಕೊಳ್ಳಲು ವಿವಿಧ ಪತ್ರಿಕೆಗಳಿಗೆ ಪ್ರಕಟನೆ ನೀಡಬೇಕು. ಬಹುಮಾನಕ್ಕೆ ಪರಿಗಣಿಸಲು ಲೇಖಕರು ಮತ್ತು ಪ್ರಕಾಶಕರಿಂದ ಪುಸ್ತಕಗಳನ್ನು ಬರಮಾಡಿಕೊಳ್ಳುವುದರ ಜೊತೆಗೆ ಆಸಕ್ತ ಸಾರ್ವಜನಿಕರಿಂದಲೂ ಅರ್ಹ ಪುಸ್ತಕಗಳನ್ನು

ಸೂಚಿಸುವಂತೆ ಪ್ರಕಟಣೆಯಲ್ಲಿ ಕೇಳತಕ್ಕದ್ದು. ಹೀಗೆ ಸೂಚಿಸಲ್ಪಡುವ ಪುಸ್ತಕಗಳನ್ನು ಲೇಖಕರು ಮತ್ತು ಪ್ರಕಾಶಕರು ಕಳುಹಿಸದಿದ್ದರೆ, ತಮ್ಮ ಗಮನಕ್ಕೆ ಬಂದ ಅಂತ ಪುಸ್ತಕಗಳನ್ನು ಅಕಾಡೆಮಿ ಅಧ್ಯಕ್ಷರು ಹಾಗೂ ಸದಸ್ಯರು ನೇರವಾಗಿ ಬಹುಮಾನಗಳಿಗೆ ಪರಿಗಣಿಸಬಹುದು.

8.2.3 ಬಹುಮಾನಕ್ಕೆ ಕೃತಿಗಳನ್ನು ಆಯ್ಕೆ ಮಾಡುವಾಗ ಆಯಾ ಪ್ರಕಾರದಲ್ಲಿ ಪರಿಣಿತರನ್ನು ಮೌಲ್ಯಮಾಪಕರಾಗಿ ಗುರುತಿಸಿ ಅವರಿಗೆ ಪ್ರಶಸ್ತಿ ಬಂದ ಪುಸಕ್ತಗಳನ್ನು ನೀಡಿ ಮೌಲ್ಯಮಾಪಕರಿಂದ ಬಂದ ಫಲಿತಾಂಶದ ಆಧಾರದ ಮೇಲೆ ಬಹುಮಾನಕ್ಕೆ ಪರಿಗಣಿಸುವುದು.

8.2.4 ಹೀಗೆ ಪ್ರಶಸ್ತಿಗೆ ಆಯ್ಕೆಯಾದ ಪ್ರತಿಯೊಂದು ಪುಸ್ತಕದ 10 ಪ್ರತಿಗಳನ್ನು ಅಕಾಡೆಮಿ ಕೊಂಡುಕೊಳ್ಳುವುದು.

## 9. ಮಕ್ಕಳ ಸಾಹಿತ್ಯ ಸಂಪಾದನೆ:

9.1 ಆಯಾ ವರ್ಷದಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಮಕ್ಕಳ ಕಾವ್ಯ, ಕಥೆ, ನಾಟಕ, ವಿಮರ್ಶೆ ಹಾಗೂ ವೈವಿಧ್ಯಮಯ ಲೇಖನಗಳನ್ನೊಳಗೊಂಡ 5 ಕೃತಿಗಳನ್ನು ಸಂಪಾದಿಸುವುದು. ಈ ನಿಮಿತ್ತ ರಚಿಸಲಾದ ಆಯ್ಕೆ ಸಮಿತಿಯ ಶಿಫಾರಸ್ಸಿನಂತೆ ಸಂಪಾದಕರನ್ನು ಆಯ್ಕೆ ಮಾಡಲಾಗುವುದು.

9.2 ಸಂಪಾದಕರಿಗೆ ರೂ.4000/- (ನಾಲ್ಕು ಸಾವಿರ) ಗೌರವಧನ ಸಂಪಾದಿತ ಹತ್ತು ಗೌರವ ಕೃತಿಗಳು ಹಾಗೂ ಅಂಚೆ ವೆಚ್ಚ ಮತ್ತು ಸಾದಿಲ್ವಾರು ಖರ್ಚಿಗೆ ರೂ.1000/- (ಒಂದು ಸಾವಿರ) ನೀಡುವುದು. ಜೊತೆಗೆ ಸಂಪಾದಕರಿಗೆ ಎರಡು ಭಾರಿ ಅಕಾಡೆಮಿ ಕಾರ್ಯಾಲಯಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚ ನೀಡುವುದು.

9.3 ಪ್ರತಿ ಸಂಪಾದನೆ ಕೃತಿಯಲ್ಲಿ ಒಬ್ಬ ಲೇಖಕನ ಒಂದೊಂದೇ ಕವಿತೆ/ಕಥೆ/ನಾಟಕ/ ವಿಮರ್ಶೆ/ಲೇಖನ ಬಳಸಿಕೊಳ್ಳುವುದು.

9.4 ಒಬ್ಬ ಲೇಖಕನ ಎಲ್ಲಾ ಪ್ರಕಾರದ ಬರಹಗಳು ಆಯ್ಕೆಯಾಗಬಹುದು, ಆದರೆ, ಒಂದೊಂದೇ ಬಳಸಿಕೊಳ್ಳಬೇಕು.

9.5 ಲೇಖಕರಿಗೆ ಒಂದು ಗೌರವ ಪ್ರತಿ ನೀಡಿ ಕವಿತೆ, ಕಥೆಗೆ ರೂ.250/-ರಂತೆ ಉಳಿದ ಬರಹಗಳಿಗೆ ರೂ.350/- ಸಂಭಾವನೆ ನೀಡುವುದು.

9.6 ಅಕಾಡೆಮಿ ಪುಸ್ತಕ ಪ್ರಕಟಣೆ ಹಾಗೂ ಮರು ಮುದ್ರಣದ ಹಕ್ಕು ಅಕಾಡೆಮಿಗೆ ಸೇರಿರುತ್ತದೆ. ಅಕಾಡೆಮಿ ಹೊರತುಪಡಿಸಿ ಸದರಿ ಸಂಪಾದನೆಯಲ್ಲಿಯ ಹಕ್ಕು ಆಯಾಯ ಲೇಖಕರಿಗೆ ಸೇರಿರುತ್ತದೆ.

**10. ಪ್ರಕಟಣೆಗಳು :**

10.1 ವಿಚಾರ ಸಂಕೀರ್ಣ, ಕಮ್ಮಟ, ಸಂವಾದಗಳಲ್ಲಿ ಮಂಡಿತವಾದ ವಿಷಯಗಳನ್ನು ಆಧರಿಸಿ ಆದ್ಯತೆಗನುಸಾರ ಪುಸ್ತಕ ರೂಪದಲ್ಲಿ ಪ್ರಕಟಿಸುವುದು.

10.2 ಮಕ್ಕಳ ಬರಹಕ್ಕೆ ಪ್ರೋತ್ಸಾಹಿಸಲು ವಿವಿಧ ಪ್ರಕಾರಗಳ ಹಸ್ತ ಪ್ರತಿ ಆಹ್ವಾನಿಸುವುದು ಹಾಗೂ ಯೋಗ್ಯ ಕೃತಿಯನ್ನು ಆಯ್ಕೆ ಮಾಡಿ ಅಕಾಡೆಮಿ ಪ್ರಕಟಿಸುವುದು. ಪ್ರಕಟಣೆಗೆ ಯೋಗ್ಯ ಕೃತಿ ದೊರೆಯದೇ ಇದ್ದಲ್ಲಿ, ಸದರಿ ಯೋಜನೆ ಆ ವರ್ಷದಲ್ಲಿ ಕೈಬಿಡುವುದು. ಆಯ್ಕೆಗೊಂಡ ಹಸ್ತಪ್ರತಿಗೆ ರೂ.1000/- (ಒಂದು ಸಾವಿರ) ಗೌರವಧನ ಹಾಗೂ ಪ್ರಕಟಿತ 25 ಪ್ರತಿಗಳನ್ನು ಲೇಖಕರಿಗೆ ಕೊಡುವುದು.

10.3 ಮಕ್ಕಳ ಸೃಜನಶೀಲತೆಯನ್ನು ಪ್ರೋತ್ಸಾಹಿಸಲು ಹಾಗೂ ಅವರ ಅಭಿವ್ಯಕ್ತಿ ಕ್ರಮವನ್ನು ಹೆಚ್ಚಿಸಲು ವಿಭಾಗ ಮಟ್ಟದಲ್ಲಿ ಕಮ್ಮಟಗಳನ್ನು ಏರ್ಪಡಿಸುವುದು. ಕಮ್ಮಟದ ಒಟ್ಟಾರೆ ಫಲಶೃತಿಯಾಗಿ ಮೂಡಿಬಂದ ಸಾಹಿತ್ಯವನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸುವುದು.

10.4 ಅಕಾಡೆಮಿಯ ಉಪನಿಬಂಧನೆಗಳು, ಉದ್ದೇಶ, ಕಾರ್ಯಸೂಚಿಗಳನ್ನು ತಿಳಿಸುವ ಕಿರು ಮಾಹಿತಿ ಪತ್ರಿಕೆ (ಬ್ರೋಶರ್) ಪ್ರಕಟಿಸುವುದು.

10.5 ಕಾಲಕಾಲಕ್ಕೆ ವಿಷಯಕ್ಕನುಗುಣವಾಗಿ ಮಕ್ಕಳಿಗೆ, ಪಾಲಕರಿಗೆ ತಿಳುವಳಿಕೆ ಮೂಡಿಸುವ ಮತ್ತು ಪ್ರಚಾರಕ್ಕೆ ಸಂಬಂಧವಾಗಿ ಕರಪತ್ರಗಳನ್ನು, ಪೋಸ್ಟರ್ ಗಳನ್ನು ಮುದ್ರಿಸಿ ಪ್ರಕಟಿಸುವುದು.

10.6 ಮಕ್ಕಳ ಸಂರಕ್ಷಣೆಗಾಗಿ ಪಾಲಕ ಪೋಷಕರಿಗೆ " ಬಾಲವಿಕಾಸ ಕೈಪಿಡಿ " ಪ್ರಕಟಿಸುವುದು.

10.7 ಮಕ್ಕಳ ಗ್ರಾಮೀಣ ಜನಪದ ಆಟಗಳು, ಹಾಡುಗಳು, ಜಾನಪದ ಕಥೆಗಳನ್ನು ಆಡಿಯೋ, ವಿಡಿಯೋ ಬಳಸಿ ದಾಖಲಿಸುವುದು ಹಾಗೂ ಅಗತ್ಯ ಸಂದರ್ಭದಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು

10.8 ಮಕ್ಕಳ ಆದ್ಯತೆ ಮೇಲೆ ಬೀರುವ ಡಾಕ್ಯೂಮೆಂಟರಿ ಸಿನಿಮಾಗಳನ್ನು ಸಿದ್ಧಗೊಳಿಸುವುದು ಅವುಗಳನ್ನು ಮತ್ತು ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಇರುವ ಮಕ್ಕಳ ಸಿನೆಮಾಗಳನ್ನು ಮಕ್ಕಳಿಗೆ ತೋರಿಸುವುದು.

10.9 ವಯಸ್ಸಿಗೆ ಅನುಸಾರವಾಗಿ ಮಕ್ಕಳ ಮನಸ್ಸಿಗೆ ಮುದನೀಡುವ ಕಥೆ, ಕವಿತೆ, ವಿವಿಧ ಮಾಹಿತಿಗಳ ಆಡಿಯೋ, ವಿಡಿಯೋ ಮಾದರಿಯಾಗಿ ಸಿದ್ಧಗೊಳಿಸಿ ಮಕ್ಕಳಿಗೆ ಕೇಳಿಸಿ, ತೋರಿಸಿ ಅದರ ವರದಿಯನ್ನು ಸರ್ಕಾರಕ್ಕೆ ನೀಡುವುದು.

**11. ವಾರ್ತಾ ಪತ್ರ:**

11.1 ಅಕಾಡೆಮಿಯ ಕಾರ್ಯಚಟುವಟಿಕೆಗಳು ಹಾಗೂ ಮಹತ್ವದ ಸಂಗತಿ ತಿಳಿಸುವ ಬಾಲವಿಕಾಸ ಅಕಾಡೆಮಿಯ ಮುಖವಾಣಿ ಪತ್ರಿಕೆ " ಬಾಲವಿಕಾಸ ವಾರ್ತೆ'' ಇರುವುದು ಅದು ಈ ಕೆಳಗಿನಂತೆ ಪ್ರಕಟಗೊಳ್ಳುವುದು:

11.1.1. ಎ 4 ಅಳತೆಯ 12 ಪುಟ ಹೊಂದಿರುವುದು. ಅಗತ್ಯಕ್ಕೆ ತಕ್ಕಂತೆ ಪುಟಗಳನ್ನು ಹೆಚ್ಚಿಸಬಹುದು.

11.1.2. ಪ್ರಾರಂಭದಲ್ಲಿ ತ್ರೈಮಾಸಿ, ನಂತರದಲ್ಲಿ ದ್ವೈಮಾಸಿಕವಾಗಿ ತದನಂತರ ಮಾಸಿಕವಾಗಿ ಪ್ರಕಟಿಸುವುದು.

11.1.3. ರಾಜ್ಯದ ಎಲ್ಲಾ ಗ್ರಂಥಾಲಯ, ಗ್ರಾಮಪಂಚಾಯಿತಿ, ಬಾಲಭವನಗಳು ಹಾಗೂ ಪ್ರಮುಖ ಇಲಾಖೆ, ಮಕ್ಕಳ ಕ್ಷೇತ್ರದ ಸಂಘ-ಸಂಸ್ಥೆಗಳಿಗೆ ವಿತರಣೆಯಾಗುವಂತೆ ನೋಡಿಕೊಳ್ಳುವುದು.

11.1.4. ಸದರಿ ಪತ್ರಿಕೆ ನೋಡಿಕೊಳ್ಳಲು ಒಬ್ಬರು ಸಹ ಸಂಪಾದಕರನ್ನು ಮತ್ತು ಒಬ್ಬರನ್ನು ವ್ಯವಸ್ಥಾಪಕರನ್ನಾಗಿ ನೇಮಿಸಿ ಅವರಿಗೆ ತಲಾ ಗೌರವಧನ ರೂ.2000/- ರಂತೆ ಪ್ರತಿ ಸಂಚಿಕೆಗೆ ನೀಡುವುದು.

**12. ವಿಕಲಚೇತ ಮಕ್ಕಳ ಕಾರ್ಯಕ್ರಮಗಳು:**

12.1 ಪ್ರತಿ ತಾಲ್ಲೂಕಿನಲ್ಲಿ ವಿಕಲಚೇತನ/ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗುರುತಿಸಿ ಅವರಿಗೆ ಸೂಕ್ತ ತರಬೇತಿ ನೀಡಿ ಪುನರ್ವಸತಿ ಕಲ್ಪಿಸುವಲ್ಲಿ ನೆರವಾಗುವುದು. ಇದಕ್ಕೆ ಪರಿಣಿತ ಸಂಸ್ಥೆಗಳ ಸಹಕಾರ ಹಾಗೂ ನೆರವು ಪಡೆಯುವುದು.

**13. ಅಲೆಮಾರಿ ಮಕ್ಕಳಿಗಾಗಿ:**

13.1 ಅಲೆಮಾರಿ ಮಕ್ಕಳ ನೆಲೆಗಳನ್ನು ವಿಶೇಷ ಸರ್ವೇ ಮೂಲಕ ಗುರುತಿಸಿ ವೃತ್ತಿ ಮೂಲ ಶಿಕ್ಷಣ ನೀಡಿ ಅವರನ್ನು ಮುಖ್ಯವಾಹಿನಿಗೆ ತರುವುದಕ್ಕೆ ಯೋಜನೆಗಳನ್ನು ರೂಪಿಸುವುದು. ಇದಕ್ಕೆ ಪರಿಣಿತ ಸಂಘ-ಸಂಸ್ಥೆಗಳ ಮೂಲಕ ಅನುಷ್ಠಾನ ಗೊಳಿಸುವುದು.

18/12

## 14. ದೇವದಾಸಿ ಹಾಗೂ ಬಾಲಕಾರ್ಮಿಕರ ಪದ್ಧತಿ ನಿರ್ಮೂಲನೆ:

14.1 ವಿಶೇಷ ಸರ್ವೇ ಮೂಲಕ ದೇವದಾಸಿ ಮಕ್ಕಳನ್ನು ಮತ್ತು ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಿ ಅವರ ಕುರಿತು ಅಧ್ಯಯನ ಮಾಡುವುದು ಹಾಗೂ ಅವರಿಗೆ ಪುನರ್ವಸತಿ ಕುರಿತು ಯೋಜನೆ ರೂಪಿಸಿವುದು ಅವರಲ್ಲಿ ಆತ್ಮಸ್ಥೈರ್ಯ ತುಂಬುವಂತಹ ಶಿಬಿರಗಳನ್ನು ನಡೆಸುವುದು. ಅವರ ಶಿಕ್ಷಣದ ಬಗ್ಗೆ ಕಾಳಜಿ ವಹಿಸುವುದು. ಅವರಿಗೆ ವೃತ್ತಿ ಕೌಶಲ್ಯ ಶಿಕ್ಷಣ ನೀಡುವುದು. ಇದಕ್ಕಾಗಿ ಜೀವನ ಶಿಕ್ಷಣ ಶಾಲೆಗಳನ್ನು ತೆರೆದು ಪಾಲಕರಿಗೆ ವಿಶೇಷ ಜಾಗೃತಿ ಶಿಬಿರಗಳನ್ನು ನಡೆಸಿ ಮೂಢನಂಬಿಕೆಗಳಿಂದ ಹೊರತರುವಂತೆ ಮಾಡುವುದು. ಮಕ್ಕಳ ಹಕ್ಕುಗಳ ಬಗ್ಗೆ ಪಾಲಕರಲ್ಲಿ ಜಾಗೃತಿ ಮೂಡಿಸುವುದು. ಈ ಕಾರ್ಯಗಳನ್ನು ಜವಾಬ್ದಾರಿಯುತ ಸಂಘ-ಸಂಸ್ಥೆಗಳ ಮೂಲಕ ನಡೆಸುವುದು.

## 15. ಮುಖ್ಯವಾಹಿನಿಯಲ್ಲಿ ಇರುವ ಮಕ್ಕಳಿಗಾಗಿ:

15.1 ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವಂತೆ ಮಕ್ಕಳಲ್ಲಿರುವ ಒತ್ತಡವನ್ನು ಕಡಿಮೆ ಮಾಡಿ ನೈಜ ಪ್ರತಿಭೆ ಹೊರತರುವಂತೆ ಮಾಡಲು, ವಿವಿಧ ಇಲಾಖೆಯಿಂದ ಅನುಷ್ಠಾನಗೊಳಿಸುವ ಎಲ್ಲಾ ಕಾರ್ಯಗಳನ್ನು ಪರಿಶೀಲಿಸಿ, ಕಾರ್ಯವಿಧಾನದಲ್ಲಿ ಅವಶ್ಯ ಮಾರ್ಪಾಡು ತರಲು ಅರ್ಹ ತಜ್ಞರ ಸಮಿತಿ ರಚಿಸಿ, ಸಮಿತಿ ನೀಡಿದ ವರದಿಯಂತೆ ಸಂಬಂಧಿಸಿದ ಇಲಾಖೆಗೆ ಸಲಹೆ ನೀಡುವುದು. ನೀಡಿದ ಸಲಹೆಯಂತೆ ಕಾರ್ಯಕ್ರಮ ಅನುಷ್ಠನಗೊಳಿಸಿದ ಕುರಿತು ವರದಿ ಪಡೆಯುವುದು.

15.2 8ನೇ ತರಗತಿಯಿಂದ 10ನೇ ತರಗತಿಯವರೆಗಿನ ಮಕ್ಕಳ ನೈಜ ಪ್ರತಿಭೆ ಯಾವ ಕ್ಷೇತ್ರದಲ್ಲಿದೆ ಎಂಬುದನ್ನು S.S.L.C ಮುಗಿಸುವುದರೊಳಗೆ ಗುರುತಿಸಿ ಮಕ್ಕಳ ಪಾಲಕರಿಗೆ, ಮಕ್ಕಳ ನೈಜ ಪ್ರತಿಭೆಯ ಕ್ಷೇತ್ರ ಹಾಗೂ ಅದಕ್ಕಾಗಿ ಲಭ್ಯವಿರುವ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ, ಶೈಕ್ಷಣಿಕ, ಕ್ರೀಡೆ, ಕಲೆ ಹಾಗೂ ಇತರೆ ಕ್ಷೇತ್ರದಲ್ಲಿಯ ಅವಕಾಶಗಳನ್ನು ಗುರುತಿಸುವುದು ಹಾಗೂ ಸರಕಾರದ/ಸರಕಾರೇತರ ಸಂಸ್ಥೆಗಳ ಸಹಾಯ, ಸಾಲದ ಅವಕಾಶಗಳನ್ನು ತಿಳಿಸುವುದು.

15.3 ವಿದ್ಯಾರ್ಥಿಗಳಿಗೆ ಪದವಿ ಪೂರ್ವ ಶಿಕ್ಷಣ ನಂತರ ಮುಂದೇನು ಎಂಬ ಮಾರ್ಗದರ್ಶನ ನೀಡುವ ಮೂಲಕ ಕಲಿಕೆಗೆ ಇರುವ ಅವಕಾಶ ಮತ್ತು ಭವಿಷ್ಯತ್ತನ್ನು ರೂಪಿಸಿಕೊಳ್ಳುವುದಕ್ಕಾಗಿ ಇರುವ ಮಾರ್ಗಗಳ ಪರಿಚಯವನ್ನು ಮಾಡಿಕೊಡುವುದು.

10/12

## 16 - ಜಿಲ್ಲಾ ಬಾಲಜ್ಞಾನ ವಿಕಾಸ ಸಮುಚ್ಛಯ

16.1 ಬಾಲವನದ ಕಾರಂತಜ್ಜ ಎಂದು ಹೆಸರಾಗಿರುವ ಡಾ: ಶಿವರಾಮ ಕಾರಂತರು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ನಡೆಸಿದ ಬಾಲವನದ ಪ್ರಯೋಗಗಳನ್ನು ವಿಸ್ತೃತಗೊಳಿಸಿ ಮಕ್ಕಳ ಜ್ಞಾನ ವಿಕಾಸ, ಮನೋವಿಕಾಸ, ಭಾವನಾ ವಿಕಾಸ, ದೈಹಿಕ ವಿಕಾಸ, ಬೌದ್ಧಿಕ ವಿಕಾಸ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಪೂರಕ ಚಟುವಿಕೆಗಳನ್ನೊಳಗೊಂಡ ನಿಸರ್ಗ ಶಾಲೆ ಅಥವಾ ಸಮುಚ್ಛಯವನ್ನು ಗ್ರಾಮೀಣ ಎಲ್ಲ ವರ್ಗದ ಮಕ್ಕಳಿಗಾಗಿ ನಿರ್ಮಿಸಿ ಅವರ ಸಮಗ್ರ ವಿಕಸನಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ತರಬೇತಿ ನೀಡುವುದು. ಹಾಗೂ ಮಕ್ಕಳು ಬಿಡುವಿನ ವೇಳೆಯಲ್ಲಿ ಭೇಟಿ ನೀಡಿ ಸ್ವಯಂ ಕಲಿಕೆಯಲ್ಲಿ ತೊಡಗಿಕೊಳ್ಳುವಂತೆ ಮುಕ್ತ ವಾತಾವರಣ ನಿರ್ಮಿಸಿಕೊಡುವಂತಹ ಸಮುಚ್ಛಯ ನಿರ್ಮಿಸುವುದು. ಇದರ ಅನುಷ್ಠಾನಕ್ಕಾಗಿ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಅಕಾಡೆಮಿ ಕಾರ್ಯ ಯೋಜನೆ ರೂಪಿಸಿಕೊಳ್ಳುವುದು.

16.2 ಈ ಸಮುಚ್ಛಯದಲ್ಲಿ ಮಕ್ಕಳು ಸುಲಭವಾಗಿ ಜಗತ್ತಿನ ಜ್ಞಾನ-ವಿಜ್ಞಾನದ ಮಾಹಿತಿ ಪಡೆಯುವರು ಹಾಗೂ ಸೃಜನಶೀಲರಾಗಿ ಮನರಂಜನೆಯೊಂದಿಗೆ ಮನೋವಿಕಾಸ, ಭಾವನಾವಿಕಾಸ ಹೊಂದುವರು.

16.3 ಪ್ರಾರಂಭದಲ್ಲಿ ಇಂಥ ಕೇಂದ್ರಗಳನ್ನು ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ನಿರ್ಮಿಸುವುದು. ನಂತರ ಹಂತ ಹಂತವಾಗಿ ತಾಲ್ಲೂಕಾ ಪ್ರದೇಶಗಳಲ್ಲಿ ಇಂಥ ಸಮುಚ್ಛಯ ನಿರ್ಮಿಸುವುದು.

16.4 ಜಿಲ್ಲಾ ಮಟ್ಟದ 'ಬಾಲ ಜ್ಞಾನ ವಿಕಾಸ ಕೇಂದ್ರ' ಸಮುಚ್ಛಯವು ಕನಿಷ್ಠ 5 ಎಕರೆ ಪ್ರದೇಶದ ವಿಶಾಲ ನಿವೇಶನದಲ್ಲಿ ನಿರ್ಮಿಸಿ ಈ ಸಮುಚ್ಛಯದಲ್ಲಿ ಕೆಳಕಂಡ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು;

### 16.41 ಪರಿಸರ ಜ್ಞಾನ ವಿಕಾಸ ಕೇಂದ್ರ:

ಪ್ರತಿ ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಎರಡು ಎಕರೆ ಪ್ರದೇಶದಲ್ಲಿ ಕಾಡುತೋಟ, ಉದ್ಯಾನ ನಿರ್ಮಿಸಿ ಮಕ್ಕಳ ಗಿಡ-ಮರಗಳ ಮಧ್ಯ ಓಡಾಡಿಕೊಂಡು ವನಸಂಪತ್ತು ಹಾಗೂ ಅವಲಂಬಿತ ವನ್ಯ ಜೀವಿಗಳ ಬಗ್ಗೆ ತಿಳಿಯಲು ಮುಕ್ತ ಅವಕಾಶ ಮತ್ತು ಸೂಕ್ತ ಮಾರ್ಗದರ್ಶನ ನೀಡುವುದು.

**ಸಹಕಾರ: ಅರಣ್ಯ ಇಲಾಖೆ ಹಾಗೂ ತೋಟಗಾರಿಕಾ ಇಲಾಖೆ, ಕೃಷಿ ಇಲಾಖೆ.**

**16.42 ಬೌದ್ಧಿಕ ವಿಕಾಸ ಕೇಂದ್ರ:**

ಮಕ್ಕಳ ಬೌದ್ಧಿಕ ವಿಕಾಸಕ್ಕೆ ಪೂರಕವಆದ ಮಕ್ಕಳ ಸೃಜನಶೀಲ ಪುಸ್ತಕ, ಪತ್ರಿಕೆಗಳನ್ನೊಳಗೊಂಡ ಗ್ರಂಥಾಲಯ, ಮತ್ತು ವಾಚನಾಲಯ ನಿರ್ಮಿಸುವುದು, ಮಕ್ಕಳು ಸ್ವತ: ಪುಸ್ತಕ ಮುಟ್ಟಿ ಹುಡುಕಿ, ತೆಗೆದುಕೊಂಡು ಕುಳಿತು ಓದಲು, ಟಿಪ್ಪಣಿ ಮಾಡಿಕೊಳ್ಳಲು ಸೂಕ್ತ ಆಸನ ಸೌಲಭ್ಯವಿರಬೇಕು. ಮಕ್ಕಳ ಸೃಜನಶೀಲ ಬರವಣಿಗೆ, ಪ್ರದರ್ಶನಕ್ಕೆ ಸೂಕ್ತ ಪ್ರದರ್ಶನ ಬೋರ್ಡ್ ಹೊಂದಿರಬೇಕು. ಮಕ್ಕಳ ಇಂತಹ ಹಸ್ತ ಪ್ರತಿ ಬರಹಗಳನ್ನು ಸಂಗ್ರಹಿಸಿ ಬೈಂಡ್ ಮಾಡಿ ವಾಚನಕ್ಕೆ ಅವಕಾಶ ಮಾಡಿಕೊಡಬೇಕು.

ಸಹಕಾರ: ಗ್ರಂಥಾಲಯ ಇಲಾಖೆ.

**16.43 ಸಾಮಾನ್ಯ ಜ್ಞಾನ ವಿಕಾಸ ಕೇಂದ್ರ:**

ಮಕ್ಕಳ ಜ್ಞಾನ ವಿಕಾಸಕ್ಕೆ ಮಾಹಿತಿ ತಂತ್ರಜ್ಞಾನ ಸೇರಿದಂತೆ ಸ್ಪರ್ಧಾತ್ಮಕ ವಿಷಯಗಳ ಹಾಗೂ ಸಾಕ್ಷ್ಯ ಚಿತ್ರಗಳ ವಿಡಿಯೋ ಸಿ.ಡಿ.ಗಳನ್ನು ಸಂಗ್ರಹಿಸಿ ವಿಡಿಯೋ ಲೈಬ್ರರಿ ತೆರಯುವುದು. ಜಗತ್ತಿನ ಶ್ರೇಷ್ಠ ಮಕ್ಕಳ ಚಲನಚಿತ್ರಗಳ ಪ್ರದರ್ಶನದ ವ್ಯವಸ್ಥೆ ಕಲ್ಪಿಸುವುದು. ಈ ವಿಭಾಗದಲ್ಲಿ ಇಂಟರ್‌ನೆಟ್ ಸೌಲಭ್ಯ, ಸಾಮೂಹಿಕ ವೀಕ್ಷಣೆಗೆ ಸೂಕ್ತ ವಿಡಿಯೋ ಥೇಟರ್ ಇಡುವುದು ಅಗತ್ಯ. ಕಿರುಚಿತ್ರ ವೀಕ್ಷಣೆಗೆ ಅವಕಾಶ ನೀಡುವುದು. ಎಜುಸ್ಯಾಟ್ ಮೂಲಕ ಪ್ರಸಾರವಾಗುವ ಪಾಠ ವೀಕ್ಷಣೆಗೆ ಅವಕಾಶ ನೀಡುವುದು.

ಸಹಕಾರ: ವಿಜ್ಞಾನ ತಂತ್ರಜ್ಞಾನ ಇಲಾಖೆ.

**16.44 ಮನೋ ವಿಕಾಸ ಕೇಂದ್ರ:**

ಮಕ್ಕಳ ಮನೋವಿಕಾಸಕ್ಕೆ ಪೂರಕವಾದ ವೈಜ್ಞಾನಿಕ ಪ್ರಯೋಗ ಪರಿಕರ, ಫಜಲ್ಸ್, ಕಿಟ್ಸ್, ನೋಡಿ-ಆಡಿ-ಮಾಡಿ ತಿಳಿಯುವ ಸಾಧನೆ ಸಲಕರಣೆ, ಚಿತ್ರ ಸಾಮಗ್ರಿ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಕಲಿಕಾ ಸಾಧನೋಪಕರಣಗಳು, ಸೃಜನಾತ್ಮಕ ಕಲಾಕುಸುರಿಗಳು, ಒರಿಗಾಮಿ ಮೊದಲಾದ ಚಟುವಟಿಕೆಗಳಿಗೆ ಮುಕ್ತ ಅವಕಾಶ.

ಸಹಕಾರ: ಶಿಕ್ಷಣ ಇಲಾಖೆ, ವಿಕಲಾಂಗ ಮಕ್ಕಳ ಕಲ್ಯಾಣ ಇಲಾಖೆ.

19/12

16.45 ಪ್ರತಿಭಾ ಬಾಲ, ವಿಕಾಸ ಕೇಂದ್ರ:

1. ಮಕ್ಕಳಿಗೆ ಸಂಗೀತ, ನಾಟಕ, ನೃತ್ಯ, ಜಾನಪದ, ಚಿತ್ರಕಲೆ ಮೊದಲಾದ ಮಕ್ಕಳ ಸೃಜನಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ವೇದಿಕೆ ಒದಗಿಸುವುದು.
2. ಸಂಗೀತ ವಾದ್ಯ ಪರಿಕರ ನುಡಿಸುವುದು.
3. ಸಂಗೀತ ಆಲಿಸಲು ಸಲೂಕ್ತ ಆಡಿಯೋ ಸೌಲಭ್ಯ.
4. ನಾಟಕ, ನೃತ್ಯ ಪ್ರದರ್ಶನಕ್ಕೆ ರಂಗಸಜ್ಜಿಕೆ.
5. ಜಾನಪದ ಹಾಡು ಕೇಳಿ ಕುಣಿತದ ಪಟ್ಟುಗಳನ್ನು ತಿಳಿಸುವುದು, ಕಲಿಯಲು ಅವಕಾಶ.
6. ಸೃಜನಾತ್ಮಕ ಆಟಿಗೆಗಳಿಗೆ ಅವಕಾಶ.
7. ಮಾನವೀಯ ಮೌಲ್ಯಗಳು ಹಾಗೂ ವಿಶ್ವ ಮಾನವ ಸಂದೇಶ ಸಾರುವ ನಾಟಕ ಪ್ರದರ್ಶನ ಭಿತ್ತಿ ಚಿತ್ರ ಪ್ರದರ್ಶನ.

ಸಹಕಾರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿಕ್ಷಣ ಇಲಾಖೆ, ಸಂಗೀತ ವಿದ್ಯಾಲಯ, ಮಕ್ಕಳ ರಂಗ ಕೇಂದ್ರಗಳು, ಮೈಸೂರು-ಧಾರವಾಡ ರಂಗಾಯಣ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು.

16.4.6 ದೈಹಿಕ ವಿಕಾಸ ಕೇಂದ್ರ:

1. ಸಾಮಾನ್ಯವಾಗಿ ಮಕ್ಕಳು ಆಡುವ ಪ್ರದೇಶಗಳನ್ನು ಗುರುತಿಸಿ ಅದಕ್ಕೆ ಸಂಬಂಧಿಸಿದ ಇಲಾಖೆಗಳ ಮೂಲಕ ಆ ಪ್ರದೇಶವನ್ನು ಕ್ರೀಡಾ ಹಾಗೂ ಇತರೆ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಅಭಿವೃದ್ಧಿಗೊಳಿಸುವುದು.
2. ಎಲ್ಲಾ ಶಾಲೆಗಳಲ್ಲಿ ಆಟದ ಮೈದಾನದ ಪರಿಶೀಲನೆ, ಮತ್ತು ಮೈದಾನ ಇಲ್ಲದ ಕಡೆ ಕಲ್ಪಿಸಿಕೊಡಲು ಸಾರ್ವಜನಿಕರು ಹಾಗೂ ಸರ್ಕಾರಕ್ಕೆ ಕೇಳಿಕೊಳ್ಳುವುದು.
3. ಸ್ಥಳೀಯ ಗ್ರಾಮೀಣ ಕ್ರೀಡೆಗಳಿಗೆ ಆದ್ಯತೆ ನೀಡಿ ಮಲ್ಲಗಂಬ, ರೂಪ್ ಸಾಹಸಕ್ರೀಡೆಗಳನ್ನು ಕಲಿಯಲು ಪ್ರೇರೇಪಿಸುವುದು.
4. ಚಿನ್ನಿದಾಂಡು ಬಗಾಟ ಬಗರಿ, ಲಗೋರಿ, ಒಟ್ಟಪ್ಪದಾಟ, ಗೋಲಿ ಆಟದಂತಹ ಆಟಗಳಿಗೆ ಅವಕಾಶ ಹೆಚ್ಚು ಹೆಚ್ಚು ಸಿಗುವಂತೆ ಕಲ್ಪಿಸಿಕೊಡುವಲ್ಲಿ ಪ್ರಯತ್ನಿಸುವುದು.
5. ಹಳ್ಳಿ ಮಕ್ಕಳ ಆಟಗಳ ಪ್ರಾತ್ಯಕ್ಷಿಕೆ ತರಬೇತಿ, ನೀಡಿ ಗ್ರಾಮೀಣ ಕ್ರೀಡಾ ಸಂಪನ್ಮೂಲ ಹೆಚ್ಚಿಸುವುದು.
6. ಸ್ಥಳೀಯ ಜನಪದ ಆಟಗಳ ರೀತಿ-ನೀತಿ ಆಡುವ ವಿಧಾನ ಸಹಿತ ಮಾಹಿತಿ ಸಂಗ್ರಹ.
7. ಪ್ರತಿಭಾವಂತ ಕ್ರೀಡಾ ಪಟುಗಳಿಗೆ ಅವರ ಆಸಕ್ತಿ ಸಾಧನೆ ಗುರುತಿಸಿ ತರಬೇತಿ ಪಡೆಯುವಲ್ಲಿ ಮಾರ್ಗದರ್ಶನ ನೀಡುವುದು.

ಸಹಕಾರ: ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ, ಶಿಕ್ಷಣ ಇಲಾಖೆ.

### 16.4.7 ವಿಶ್ವ ಮಾನವ ಸಂದೇಶ ಕೇಂದ್ರ:

ಮಕ್ಕಳ ಮಾನವೀಯ ಮೌಲ್ಯಗಳು, ಜೀವಪರ ತುಡಿತದೊಂದಿಗೆ ಸಾಮಾಜೀಕರಣಗೊಳ್ಳುವಂತೆ, ದೇಶಾಭಿಮಾನದೊಂದಿಗೆ ಕುವೆಂಪು ಅವರ ವಿಶ್ವ ಮಾನವ ಸಂದೇಶ ಅರಿತು ವಿಶ್ವ ಭ್ರಾತೃತ್ವ ಬೆಳೆಸುವಂತೆ ಸೂಕ್ತ ವ್ಯಕ್ತಿತ್ವ ವಿಕಸನಕೆ ತರಬೇತಿ ನೀಡುವ ವೇದಿಕೆ.

1. ವಿಶ್ವಮಾನವ ವಿಚಾರ ಬಿಂಬಿಸುವ (ಕಥೆಗಳ ಕಾರ್ಡು ಬಳಸಿ) ಕಥಾ ವಾಚನ
2. ತಜ್ಞರ ಉಪನ್ಯಾಸ
3. ಸೃಜನಾತ್ಮಕ ಆಟಗಳು
4. ಭಿತ್ತಿ ಚಿತ್ರ ಪ್ರದರ್ಶನ
5. ಸಂವಾದ, ಚರ್ಚೆ, ವಿಚಾರಗೋಷ್ಠಿ

ಸಹಕಾರ: ಶಿಕ್ಷಣ ಇಲಾಖೆ, ಸ್ಥಳೀಯ ಕವಿಗಳು, ಸಾಹಿತಿಗಳು, ಕುವೆಂಪು ಟ್ರಸ್ಟ್.

### 16.4.8 ಸಮುದಾಯ ಕೇಂದ್ರ:

1. ಮಕ್ಕಳ ಜಾತಿ, ಧರ್ಮ, ಲಿಂಗ ತಾರತಮ್ಯ ಮರೆತು ಒಟ್ಟಿಗೆ ಕಲೆತು ಕಲಿಯಲು ಅವಕಾಶವಿರುವಂತೆ 200 ಮಕ್ಕಳು ವಸತಿ ಸಹಿತ ಉಳಿದುಕೊಂಡು ಈ ಮೂಲಕ ತಮ್ಮ ಕಾರ್ಯ ತಾವೇ ಮಾಡಿಕೊಳ್ಳುವಂತೆ ಅವಕಾಶವಿರುವ ವಸತಿ ಸೌಲಭ್ಯ ಮಾಡಿ, ಮಕ್ಕಳಲ್ಲಿ ಕೂಡಿ ಬಾಳುವ, ಸಹಕಾರ ತತ್ವ ಅಳವಡಿಸಿಕೊಳ್ಳುವಂತೆ ಮಾಡುವುದು.
   ನೆರವು: ಸಮಾಜ ಕಲ್ಯಾಣ ಇಲಾಖೆ.
2. ಕೇಂದ್ರ ನಿರ್ವಹಣೆಯ ಉಸ್ತುವಾರಿಯನ್ನು ಜಿಲ್ಲಾ ಬಾಲವಿಕಾಸ ನೋಡಿಕೊಳ್ಳುವುದು.
3. ನಿರ್ವಹಣೆಗೆ ಹಾಗೂ ಕಾರ್ಯಕ್ರಮ ಸಂಘಟಿತ ಅನುಷ್ಠಾನಗೊಳಿಸಲು ಬಾಲ ಜ್ಞಾನ ವಿಕಾಸ ಕೇಂದ್ರದ ಮುಖ್ಯಸ್ಥರನ್ನಾಗಿ ಪ್ರೌಢ ಶಾಲಾ ಮುಖ್ಯಾದ್ಯಾಪಕರ ತತ್ಸಮಾನ ಹುದ್ದೆಯವರನ್ನು ನಿಯೋಜಿಸುವುದು/ನೇಮಿಸುವುದು ಹಾಗೂ ನಿಯೋಜನೆ ಮೇರೆಗೆ ವಿಷಯವಾರು ಸಂಪನ್ಮೂಲ ತಂಡ ಅಥವಾ ಸ್ವಯಂ ಸೇವಾ ನೆಲೆಯಿಂದ ಆಯಾ ವಿಶೇಷ ಪ್ರಾವಿಣ್ಯತೆ ಪಡೆದ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು ಕಾರ್ಯ ನಿರ್ವಹಿಸುವುದು.
4. ಸಮುಚ್ಛಯ ನಿರ್ಮಾಣವಾಗಿ ಕಾರ್ಯಗತಗೊಳ್ಳುವವರೆಗೆ ಜಿಲ್ಲಾಧಿಕಾರಿಗಳ, ಇತರ ಇಲಾಖೆ, ಹಾಗೂ ಶಿಕ್ಷಣ ಸಂಘ-ಸಂಸ್ಥೆಗಳ ನೆರವು ಪಡೆದು ಈ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಸ್ಥಳಗಳನ್ನು ಗುರುತಿಸಿಕೊಂಡು ಚಟುವಟಿಕೆ ನಡೆಸುವುದು.

## 17-ರಾಜ್ಯ ಬಾಲ ಜ್ಞಾನ ವಿಕಾಸ ಸಮುಚ್ಛಯ:

ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಕೇಂದ್ರ ಸ್ಥಳವಾದ ಧಾರವಾಡ ಸಮೀಪ 50 ಎಕರೆ ಪ್ರದೇಶದಲ್ಲಿ ಕ್ರಮ ಸಂ 12 ರಿಂದ 12.4.8 ರವರೆಗಿನ ಕೇಂದ್ರ ಹಾಗೂ ಚಟುವಟಿಕೆ ಗಳೊಂದಿಗೆ

1. ಪ್ಲಾನಿಟೋರಿಯಂ
2. ಇತಿಹಾಸ ಗೋಡೆ
3. ವಸ್ತು ಸಂಗ್ರಹಾಲಯ
4. ವಿಜ್ಞಾನ ತೋಟ (ಸೈನ್ಸ್ ಪಾರ್ಕ್)
5. 'ಇ' ಲೈಬ್ರರಿ
6. ಸಾವಿರ ಮಕ್ಕಳು ಕುಳಿತುಕೊಳ್ಳುವ ಆಡಿಟೋರಿಯಂ
7. ಎರಡು ಸಾವಿರ ಮಕ್ಕಳು, ಪಾಲಕರು ಕುಳಿತು ವೀಕ್ಷಿಸುವ ಬಯಲುರಂಗ ಮಂದಿರ
8. ವಿಶಾಲ ಕಾಡು ತೋಟ
9. ಕಾಡಿನಲ್ಲಿ ಕೆರೆ
10. ಈಜುಗೊಳ
11. ಔಷಧಿ ಸಸ್ಯತೋಟ
12. ವಿವಿಧ ಸಸ್ಯೋಧ್ಯಾನ
13. ಐದನೂರು ಮಕ್ಕಳಿಗಾಗಿ ವಸತಿ ಗೃಹ
14. ಅಧ್ಯಯನ, ಸಂಶೋಧನ ಕೇಂದ್ರಗಳನ್ನೊಳಗೊಂಡಿರುತ್ತದೆ.

## 18. ಮಕ್ಕಳ ಹಕ್ಕುಗಳ ಸಂರಕ್ಷಣೆ:

18.1 ಮಕ್ಕಳ ಹಕ್ಕುಗಳ ಸಂರಕ್ಷಣೆಯ ಹಿನ್ನಲೆಯಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳ ಕಾರ್ಯ ವಿಧಾನ ಹಾಗೂ ಸಫಲತೆಯ ಬಗ್ಗೆ ಅಧ್ಯಯನ ಕೈಗೊಂಡು ವರದಿ ಸಿದ್ಧಗೊಳಿಸುವುದ. ಇದಕ್ಕಾಗಿ ತಜ್ಞರ ಉಪಸಮಿತಿ ರಚಿಸುವುದು.

18/12

## 19. ಹೊರಗುಳಿದ ಮಕ್ಕಳಿಗಾಗಿ

19.1 ಕೊಳಚೆ ಪ್ರದೇಶಗಳನ್ನು ಗುರುತಿಸಿ ಶೈಕ್ಷಣಿಕವಾಗಿ ಹಿಂದಿರುವ ಪ್ರದೇಶಗಳಲ್ಲಿ ಲಭ್ಯ ಜಾಗ ಗುರುತಿಸಿ ಮಕ್ಕಳ ಪಾರ್ಕ್, ಮಕ್ಕಳ ಲೈಬ್ರರಿ ಹಾಗೂ ಕ್ರೀಡಾ ಸಾಮಗ್ರಿ ಗಳ ಪೂರೈಕೆಯನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಮೂಲಕ ನಿರ್ವಹಣೆ ಮಾಡುವುದು.

19.2 ದೇವದಾಸಿ ಮಕ್ಕಳ, ಅಲೆಮಾರಿ ಮಕ್ಕಳು, ಬೀದಿ ಮಕ್ಕಳು, ಭಿಕ್ಷುಕ ಮಕ್ಕಳು, ಶೋಷಿತ ಮಕ್ಕಳ ಶಿಕ್ಷಣ ಹಾಗೂ ಪುನರ್ವಸತಿಗಾಗಿ ಸರ್ಕಾರದ, ಸಮಾಜ ಕಲ್ಯಾಣ ಇಲಾಖೆ ಹಿಂದುಳಿದ ವರ್ಗದ ಕಲ್ಯಾಣ ಇಲಾಖೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣ ಇಲಾಖೆ, ಅಲ್ಪ ಸಂಖ್ಯಾತ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಬರುವ ಮುರಾರ್ಜಿ ಮತ್ತು ನವೋದಯ, ವಸತಿ ಶಾಲೆ, ಕಸ್ತೂರಿಬಾ ವಸತಿ ಶಾಲೆ, ಏಕಲವ್ಯ ವಸತಿ ಶಾಲೆ, ರಾಣಿಚನ್ನಮ್ಮ ವಸತಿ ಶಾಲೆ ಇಂಥ ಮಕ್ಕಳಿಗೆ ಆದ್ಯತೆ ನೀಡಿ ಶಿಕ್ಷಣಕ್ಕೆ ಅವಕಾಶ ನೀಡುವಂತೆ ಮಾಡುವುದು. ಇಂಥ ಮಕ್ಕಳಿಗೆ 'ಜೀವನ ಕೌಶಲ' ಶಿಕ್ಷಣ ನೀಡುವ ಮೂಲಕ ಆತ್ಮ ಸ್ಥೈರ್ಯ ತುಂಬಿ ಸ್ವಾಭಿಮಾನದಿಂದ ಬದುಕುವಂತೆ ಮಾಡಿ ಪುನರ್ವಸತಿ ನೀಡುವ ಮೂಲಕ ಮುಖ್ಯವಾಹಿನಿಗೆ ತರುವುದು. ಇಂತಹ ಶಿಕ್ಷಣ ನೀಡಲು ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ದತ್ತು ತೆಗೆದು ಕೊಳ್ಳುವಂತೆ ಪ್ರೇರೇಪಿಸುವುದು. ಸಾಧ್ಯವಾದಲ್ಲಿ ಜಿಲ್ಲೆಗೊಂದು "ಜೀವನ ಶಿಕ್ಷಣ ಶಾಲೆ" ಪ್ರಾರಂಭಿಸಿ ಸೂಕ್ತ ಶಿಕ್ಷಣ ನೀಡಲು ಯೋಜನೆ ರೂಪಿಸುವುದು.

19.3 ಗಡಿನಾಡು ಪ್ರದೇಶದಲ್ಲಿರುವ ಮಕ್ಕಳಲ್ಲಿ ಕನ್ನಡ ಭಾಷೆಯ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಮತ್ತು ಆ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮ ಗಳನ್ನು ರೂಪಿಸುವುದು.

## 20. ಸಂಸ್ಕೃತಿ ವಿನಿಮಯ (ಕಲ್ಚರಲ್ ಎಕ್ಸ್‌ಚೇಂಜ್) ಕಾರ್ಯಕ್ರಮ:

20.1 ರಾಷ್ಟ್ರ-ಅಂತರರಾಷ್ಟ್ರೀಯ ಮಟ್ಟದಲ್ಲಿ, ರಾಜ್ಯ-ಅಂತರಾಜ್ಯ ಮಟ್ಟದಲ್ಲಿ ಹಾಗೂ ನಗರ-ಹಳ್ಳಿ ಮಟ್ಟದಲ್ಲಿ ಸಾಂಸ್ಕೃತಿಕ ವಿನಿಯಮ ಮಾಡಿಕೊಟ್ಟು ಮಕ್ಕಳ ಸಂಸ್ಕೃತಿಕ ಅರಿವಿನ ಪರಿಧಿ ವಿಸ್ತರಣೆಗೆ ಅವಕಾಶ ಮಾಡಿಕೊಡುವುದು.

## 21. ಅವಕಾಶಗಳು:

21.1 ಮಕ್ಕಳ ಕಾರ್ಯಚಟುವಟಿಕೆಗಳಿಗೆ ಬೃಹತ್ ಯೋಜನೆಗಳಿಗೆ ಅನಿವಾಸಿ ಭಾರತೀಯ ಕನ್ನಡಿಗರಿಂದ, ಉದ್ಯಮಿಗಳಿಂದ ದತ್ತಿ ಧನಸಹಾಯ ಪಡೆಯಲು ಅವಕಾಶವಿದೆ.

21.2 ಸಂಘ-ಸಂಸ್ಥೆಗಳ ಪ್ರಾಯೋಜಕತ್ವದ ಮೂಲಕವೂ ಕಾರ್ಯಕ್ರಮ ರೂಪಿಸಿಕೊಳ್ಳುವುದು.

21.3 ಅಕಾಡೆಮಿಯು ಅಗತ್ಯ ಸಂದರ್ಭದಲ್ಲಿ ಸರ್ಕಾರದ ಅನುಮೋದನೆಯೊಂದಿಗೆ ರಾಜ್ಯ ಸರ್ಕಾರ ಸೇವೆಯಲ್ಲಿರುವವರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಳ್ಳಲು ಅವಕಾಶ ನೀಡಿ, ಭಾಗವಹಿಸಿದವರಿಗೆ ಅನ್ಯಕಾರ್ಯ ನಿಮಿತ್ತ ರಜೆ (ಓ.ಓ.ಡಿ) ಸೌಲಭ್ಯ ಪಡೆಯಲು ಅವಕಾಶವಿರುವುದು.

21.4 ರಾಜ್ಯ/ಅಂತರ್‌ರಾಜ್ಯ ಅಂತರಾಷ್ಟ್ರೀಯಗಳಲ್ಲಿ ಮಕ್ಕಳ ಕ್ಷೇತದಲ್ಲಿ ಕಾರ್ಯನಿರತವಾಗಿರುವ ವಿವಿಧ ಸಂಘ-ಸಂಸ್ಥೆಗಳ ಕಾರ್ಯವಿಧಾನ, ವ್ಯಾಪ್ತಿ, ಸಾಧನೆ ಮೊದಲಾದವುಗಳ ನ್ನೊಳಗೊಂಡು ಮಕ್ಕಳ ಸರ್ವಾಂಗೀಣ್ ವಿಕಾಸದ ಹಿನ್ನಲೆಯಲ್ಲಿ ಅಧ್ಯಯನ ಕೈಗೊಳ್ಳುವುದು. ಈ ಅಧ್ಯಯನಕ್ಕಾಗಿ ತಜ್ಞರ ತಂಡ ನೇಮಿಸುವುದು.

21.5 ಅಂತರ ರಾಜ್ಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಅದ್ಯತಾನುಸಾರ ಅಕಾಡೆಮಿ ಸದಸ್ಯರು ಹಾಗೂ ವಿಷಯ ಪರಿಣಿತರು ಮಕ್ಕಳನ್ನೊಳಗೊಂಡ ತಂಡ ಅಧ್ಯಯನ ಪ್ರವಾಸ ಕೈಗೊಳ್ಳಲು ಅವಕಾಶುವಿರತಕ್ಕದ್ದು. ಈ ಅಧ್ಯಯನ ವರದಿಯನ್ನು ಆಧರಿಸಿ ಉಪಯುಕ್ತ ಅಂಶಗಳನ್ನು ಅಕಾಡೆಮಿ ಕಾರ್ಯ ಚಟುವಟಿಕೆಗಳಲ್ಲಿ ಬಳಸಿಕೊಳ್ಳಲು ಅವಕಾಶವಿರತಕ್ಕದ್ದು.

21.7 ಬಾಲವಿಕಾಸ . ಅಕಾಡೆಮಿಯ ಕಾರ್ಯಚಟುವಟಿಕೆಗಳು ಜನಸಾಮಾನ್ಯರಿಗೆ ಮತ್ತು ಗ್ರಾಮೀಣ ಜನರಿಗೆ ತಲುಪಲು ಬಹುಮಾದ್ಯಮಗಳನ್ನು ಅವುಗಳ ನಿಬಂಧನೆಗಳೊ ಪಟ್ಟು ಬಳಸಿಕೊಳ್ಳಲು ಅವಕಾಶವಿರುವುದು.

## 22. ಜವಾಬ್ದಾರಿಗಳು:

22.1 ಮಕ್ಕಳ ಪರ ವಕಾಲತ್ತು:

22.1.1 ಸರ್ಕಾರ ಮತ್ತು ಇತರ ಅಂಗ ಸಂಸ್ಥೆಗಳು, ಸರಕಾರಿ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳು ಕೈಗೊಳ್ಳುವ ನಿಲುವುಗಳು/ಕಾರ್ಯಕ್ರಮಗಳು ಅವುಗಳನ್ನು ಜಾರಿಗೊಳಿಸುವ ಕ್ರಮದಲ್ಲಿ, ನಿರ್ವಹಿಸುವ ಜವಾಬ್ದಾರಿಯಲ್ಲಿ ಮಕ್ಕಳ ವಿಕಾಸದ ಹಿನ್ನೆಲೆಯಲ್ಲಿ ವ್ಯತಿರಿಕ್ತ ಪರಿಣಾಮ ಉಂಟು ಮಾಡುವಂತಿದ್ದಲ್ಲಿ, ಮಕ್ಕಳ ಪರವಾದ ಬದಲಾವಣೆಗಳನ್ನು ತರಲು ಅಕಾಡೆಮಿ ವಕಾಲತ್ತು ವಹಿಸಿ ಪ್ರಭಾವ ಬೀರುವುದು.

22.1.2. ಮಕ್ಕಳ ಕುರಿತಾಗಿ ತಯಾರಿಸಿದ ಅಧ್ಯಯನ ವರದಿಗಳು, ಸಂಶೋಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಾಮಗ್ರಿಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಶಿಲಿಸಿ ಅಗತ್ಯಾನುಸಾರ ಪೂರ್ವಾನುಮತಿ ಪಡೆದು ಪ್ರಕಟಿಸುವುದು ಅಥವಾ ಅಗತ್ಯ ಅಂಶಗಳನ್ನು ಪರಿಶೀಲಿಸಿ ಯೋಜನೆ ರೂಪಿಸಿಕೊಳ್ಳುವುದು.

22.1.3 ಪ್ರಸ್ತುತ ಜಾರಿಯಲ್ಲಿರುವ ಪ್ರಾಥಮಿಕ, ಪ್ರೌಢ ಶಾಲಾ ಪಠ್ಯ ಪುಸ್ತಕಗಳನ್ನು ಪರಾಮರ್ಶಿಸಿ ಮಕ್ಕಳ ಸರ್ವಾಂಗೀಣ ವಿಕಾಸದ ಹಿನ್ನೆಲೆಯಲ್ಲಿ ಸೂಕ್ತ ಮಾರ್ಗ ಸೂಚಿಗಳನ್ನು ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಸಲಹೆಗಳನ್ನು ಕಾಲಕಾಲಕ್ಕೆ ನೀಡುವುದು. ಮಕ್ಕಳ ಶಿಕ್ಷಣ, ಆರೋಗ್ಯ, ಆಹಾರಕ್ಕೆ ಸಂಬಂಧವಾಗಿ ಸರಕಾರ ಪ್ರಕಟಿಸುವ ಯೋಜನೆಗಳ ಸಾಧಕ-ಬಾಧಕಗಳ ಬಗ್ಗೆ ಪರಿಶೋಧಿಸಿ ಸರಕಾರಕ್ಕೆ ವರದಿ ಸಲ್ಲಿಸುವುದು.

**23. ಸಂಶೋಧನ ಫೆಲೋಶಿಪ್:**

ಮಕ್ಕಳ ಅಧ್ಯಯನ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರತಿಭಾನ್ವಿತ ಸಂಶೋದಕರಿಗೆ ಅವರ ಸಂಶೋಧನಾ ವರದಿಯನ್ನು ಪರಿಶೀಲಿಸಿ ಫಲೋಶಿಪ್‌ಗೆ ಅರ್ಹತೆ ಹೊಂದಿದ್ದರೆ ಸರ್ಕಾರದ ಅನುಮೋದನೆ ಫೆಲೋಶಿಪ್ ರೂ.15,000 ನೀಡುವುದು.

**24. ಮಕ್ಕಳ ಸಹಾಯವಾಣಿ.**

ಅಕಾಡೆಮಿಯ ಕೇಂದ್ರ ಕಛೇರಿಯಿಂದ. ಮಕ್ಕಳ ಮಾನಸಿಕ, ದೈಹಿಕ, ಶೈಕ್ಷಣಿಕ ಸಮಸ್ಯೆಗಳಿಗೆ ಸಂಬಂಧಿಸಿದ ಮಾಹಿತಿ ಕೇಂದ್ರವನ್ನು ತೆರೆಯುವುದು ಮತ್ತು ದೂರವಾಣಿ ಮೂಲಕ ಸಮಸ್ಯೆ ಆಲಿಸಿ ಅದಕ್ಕೆ ಸೂಕ್ತ ಮಾಹಿತಿ ಮತ್ತು ಸಲಹೆಯನ್ನು ನೀಡುವ ಮಕ್ಕಳ ಸಹಾಯವಾಣಿ ಹೊಂದುವುದು.

19/12

***